ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಸಪ್ಟೆಂಬರ್ 2019

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-19 ಸಂಚಿಕೆ-9 ಪುಟಗಳು-10 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶೃಂಗೇರಿ ಭೇಟಿ : ಜಗದ್ಗುರುಗಳಿಂದ ವಿಶ್ವ ಸ್ಥಾನಿಕ ಸಮಾವೇಶಕ್ಕೆ ಶುಭಾಶೀರ್ವಾದ






ಪ್ರತಿ ವರ್ಷವೂ ಗಣೇಶ ಚತುರ್ಥಿಯ ಮುನ್ನಾ ಆದಿತ್ಯವಾರ ಚಾತುರ್ಮಾಸ ನಿರತ ಗುರುಗಳನ್ನು ಭೇಟಿಯಾಗಿ ಆಶೀರ್ವಾದ ಪಡೆಯುವುದು ಸ್ಥಾನಿಕ ಬ್ರಾಹ್ಮಣರ ಆದ್ಯ ಕರ್ತವ್ಯಗಳಲ್ಲೊಂದಾಗಿದೆ. ಈ ರಿವಾಜನ್ನು ಪಾಲಿಸಿದಲ್ಲಿ ಸಮಾಜಕ್ಕೆ ಶ್ರೀ ಶಾರದಾ ಚಂದ್ರಮೌಳೀಶ್ವರರ ಹಾಗೂ ಗುರುಗಳ ಕೃಪಾಶೀರ್ವಾದ ಸದಾ ಇರುವುದಾಗಿ ಗುರುಗಳು ಬಹಳ ಹಿಂದೆಯೇ ಅಪ್ಪಣೆ ಕೊಡಿಸಿದ್ದರು. ಅಂತೆಯೇ ಎಲ್ಲಾ ಊರುಗಳಲ್ಲಿರುವ ಸಂಘಗಳು ತಮ್ಮ ತಮ್ಮ ಊರಿನ ಸಮಾಜಬಾಂಧವರನ್ನು ಅಂದು ಶೃಂಗೇರಿಗೆ ಕರೆದೊಯ್ಯುವ ವ್ಯವಸ್ಥೆಯನ್ನು ಭಕ್ತಿಯಿಂದ ನಡೆಸಿರುತ್ತಾರೆ. ದೇಶವಿದೇಶಗಳಲ್ಲಿ ನೆಲೆಸಿರುವ ಸಮಾಜಬಾಂಧವರೂ ಕೂಡಾ ಈ ದಿನದಂದು ಅವರಾಗಿಯೇ ಶೃಂಗೇರಿಯಲ್ಲಿ ಬಂದು ಸೇರುವುದು ವಿಶೇಷವಾಗಿದೆ. ನಮಗೂ ಹಳೆಯ ಮಿತ್ರರು ಹಾಗೂ ಸಂಬಂಧಿಕರನ್ನು ಭೇಟಿಯಾಗುವ ಸದವಕಾಶ. ಅಂತೆಯೇ ಉಡುಪಿಯಿಂದಲೂ ಸುಮಾರು 90 ಜನ ಸಮಾಜ ಬಾಂಧವರು ನಾಲ್ಕು ಬಸ್ಸುಗಳಲ್ಲಿ ಶೃಂಗೇರಿಗೆ ತಾ.24-08-2019ರಂದು ತೆರಳಿದರು. ಅಲ್ಲಿ ಕಾಸರಗೋಡು, ಕುಂದಾಪುರ, ಪಡುಬಿದ್ರೆ, ಕಾರ್ಕಳ ಮೂಡಬಿದ್ರೆ, ಮಂಗಳೂರು, ಮೈಸೂರು, ಬೆಂಗಳೂರು, ಮುಂಬಯಿ ಇತ್ಯಾದಿ ಊರುಗಳಿಂದ ಬಂದ ನಮ್ಮವರನ್ನು ಕೂಡಿ ಕೊಂಡರು. ದಾರಿ ಮಧ್ಯೆ ಹೆಬ್ರಿಯಲ್ಲಿ ಫಲಾಹಾರದ ವ್ಯವಸ್ಥೆ ಮಾಡಲಾಗಿತ್ತು.

ಶೃಂಗೇರಿಯಲ್ಲಿ ತುಂತುರುಮಳೆ ಹಾಗೂ ಬಿಸಿಲಿನ ಮಿಶ್ರ ವಾತಾವರಣವಿತ್ತು. ವಾರದ ಹಿಂದೆ ವಿಪರೀತ ಮಳೆಯಿಂದಾಗಿ ತುಂಗಾ ನದಿ ಉಕ್ಕಿ ಹಲವಾರು ಪ್ರದೇಶಗಳ ಮುಳುಗಡೆಯಾಗಿತ್ತಂತೆ. ಆದರೆ ಅಂದು ತುಂಗೆ ಪ್ರಶಾಂತವಾಗಿ ಹರಿಯುತ್ತಿದ್ದಳು. ಎಲ್ಲರೂ ಶ್ರೀ ಶಾರದೆ, ತೋರಣ ಗಣಪತಿ ಮತ್ತು ಶ್ರೀ ಶಂಕರಾಚಾರ್ಯರ ದೇವಸ್ಥಾನದಲ್ಲಿ ದರ್ಶನಗೈದು ಗುರುಗಳ ಭೇಟಿಗಾಗಿ ನರಸಿಂಹವನಕ್ಕೆ ತೆರಳಿದೆವು. ಉಭಯ ಗುರುಗಳು ಸಾಲಾಗಿ ಬಂದ ಭಕ್ತರಿಗೆ ಫಲ ಮಂತ್ರಾಕ್ಷತೆಯಿತ್ತು ಆಶೀರ್ವದಿಸಿದರು. ನಂತರ ಹಿರಿಯ ಗುರುಗಳು ಅನುಷ್ಠಾನಕ್ಕಾಗಿ ತೆರಳಿದರು. ಕಿರಿಯ ಗುರುಗಳಾದ ಶ್ರೀ ಶ್ರೀ ವಿಧುಶೇಖರ ಭಾರತೀಸ್ವಾಮಿಗಳವರು ಗುರುಭವನದಲ್ಲಿ ಸೇರಿದ್ದ ಸುಮಾರು 2500ಕ್ಕೂ ಮಿಕ್ಕಿ ಸಮಾಜಬಾಂಧವರನ್ನು ಉದ್ದೇಶಿಸಿ ಅನುಗ್ರಹ ಭಾಷಣವಿತ್ತರು. ಯಶಸ್ಸಿಗೆ ತಪಸ್ಸು ಅಗತ್ಯ. ತಪಸ್ಸೆಂದರೆ ಕಣ್ಣು ಮುಚ್ಚಿ ಮಂತ್ರ ಪಠಿಸುವುದು ಎಂದರ್ಥವಲ್ಲ. ಹಿಡಿದ ಕಾರ್ಯವನ್ನು ಶ್ರದ್ಧಾ ಭಕ್ತಿ ಯಿಂದ ಮಾಡುವುದೇ ತಪಸ್ಸು ಎಂದು ನಿದರ್ಶನಗಳೊಂದಿಗೆ ಶ್ಲೋಕಗಳನ್ನು ಉದಾಹರಿಸಿ ವಿವರಿಸಿದರು. ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಬಗ್ಗೆ ವಿವರಗಳುಳ್ಳ ಕರಪತ್ರವನ್ನು ಬಿಡುಗಡೆಗೊಳಿಸಿ ಬೆಂಗಳೂರಿನಲ್ಲಿ ಜನವರಿ 11 ಹಾಗೂ 12ರಂದು ಜರಗಲಿರುವ ಜಾಗತಿಕ ಮಟ್ಟದ ಸ್ಥಾನಿಕ ಬ್ರಾಹ್ಮಣರ ಸಮಾವೇಶಕ್ಕೆ ಫಲಮಂತ್ರಾಕ್ಷತೆಯಿತ್ತು ಹರಸಿ ಅದರ ಕರಪತ್ರವನ್ನು ಬಿಡುಗಡೆಗೊಳಿಸಿದರು. ಕೋಟೆಕಾರು ಶೃಂಗೇರಿ ಶಾಖಾಮಠದ ಧರ್ಮಾಧಿಕಾರಿಗಳಾದ ಶ್ರೀ ಸತ್ಯಶಂಕರ ಬೊಳ್ಳಾವರವರ ನೇತೃತ್ವದಲ್ಲಿ ನಮ್ಮ ಸಮಾಜದ ಎಲ್ಲಾ ಸಂಘಗಳು ಮತ್ತು ದೇವಾಲಯಗಳ ಮುಖ್ಯಸ್ಥರು ಒಟ್ಟಾಗಿ ನಿಂತು ಗುರುಗಳಿಗೆ ಸಮಷ್ಠಿ ಭಿಕ್ಷೆ ಸಮರ್ಪಿಸಿದರು. ನಂತರ ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಭೋಜನಾನಂತರ ನಮ್ಮ ಸಂಘದ ಸದಸ್ಯರು ಕಿಗ್ಗಾದಲ್ಲಿರುವ ಋಷ್ಯಶೃಂಗೇಶ್ವರ ದೇವಾಲಯ ಹಾಗೂ ಸಿರಿಮನೆ ಜಲಪಾತಕ್ಕೂ ಭೇಟಿಯಿತ್ತು ಸಂಜೆ ಉಡುಪಿಗೆ ಹಿಂದಿರುಗಿದರು.

## ಶಾರದೆಯ ಸನ್ನಿಧಾನದಲ್ಲಿ ವರಮಹಾಲಕ್ಷ್ಮೀ ವ್ರತ



ತಾ.09-08-2019 ರಂದು ಸಂಜೆ ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಮಹಿಳಾವೇದಿಕೆಯ ಆಶ್ರಯದಲ್ಲಿ ಮುಖ್ಯ ಸಭಾಂಗಣದಲ್ಲಿ ವರಮಹಾಲಕ್ಷ್ಮೀ ವ್ರತವನ್ನುಆಚರಿಸಲಾಯಿತು. ಶ್ರೀ ಕೊಕ್ರಾಡಿ ಸುರೇಶ ರಾವ್ ಹಾಗೂ ಶ್ರೀಮತಿ ನಾಗವಲ್ಲಿ ದಂಪತಿಗಳು ಕರ್ತೃಗಳಾಗಿ ಧಾರ್ಮಿಕ ವಿಧಿವಿಧಾನಗಳನ್ನು ನಿರ್ವಹಿಸಿದರು. ಶ್ರೀ ತಲಪಾಡಿ ಸುಬ್ರಹ್ಮಣ್ಯ ಭಟ್‌ರವರು ಪುರೋಹಿತರಾಗಿ ಆಗಮಿಸಿ ವರಮಹಾಲಕ್ಷ್ಮೀವ್ರತದ ಮಹತ್ವವನ್ನು ತಿಳಿಸಿದರು. ಸುಮಾರು 100 ಜನ ಮಹಿಳೆಯರು ಹಾಗೂ ಭಕ್ತರು ಭಾಗವಹಿಸಿದ್ದರು. ಪ್ರಸಾದಫಲಾಹಾರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು,
ಉಡುಪಿ – 576 102.

**ಆಮಂತ್ರಣ**

ಮಾನ್ಯ ಸಮಾಜಬಾಂಧವರೇ,
ಸ್ವಸ್ತಿ! ಶ್ರೀ ವಿಕಾರಿ ನಾಮ ಸಂವತ್ಸರದ ಕನ್ಯಾ ಮಾಸ ದಿನ ೨೧ ಸಲುವ ಆಶ್ವಯುಜ ಶುದ□ (ದಶಮಿ) ೧೦ ಯು, ತಾ.08-10-2019ನೇ ಮಂಗಳವಾರ

ವಿಜಯದಶಮಿ ದಿನದಂದು

**ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ**

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

| ಶ್ರೀ ಯು. ಅರವಿಂದ ಕುಮಾರ್ | ಶ್ರೀ ಬಿ. ಜಯರಾಮ ರಾವ್ | ಶ್ರೀ ಮಂಜುನಾಥ ಹೆಬ್ಬಾರ್ |
|---|---|---|
| ಕಾರ್ಯದರ್ಶಿ | ಕೋಶಾಧಿಕಾರಿ | ಅಧ್ಯಕ್ಷರು |

ವಿ.ಸೂ : ಈ ವರ್ಷವೂ ನವರಾತ್ರಿಯ ಪ್ರತೀ ದಿನ ಸಂಜೆ ಶ್ರೀ ಶಾರದಾ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆಯನ್ನು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು. ದುರ್ಗಾ ನಮಸ್ಕಾರ ಸೇವೆಯ ಕರ್ತೃಗಳಾಗಬಯಸುವವರಿಗೆ ರೂ.5000 ಸೇವಾದರ ನಿಗದಿಪಡಿಸಲಾಗಿದೆ. ಆಸಕ್ತ ಭಕ್ತರು ವಿವರಗಳಿಗಾಗಿ ಕಾರ್ಯದರ್ಶಿ ಶ್ರೀ ಯು ಅರವಿಂದ ಕುಮಾರ್ 9343560647ರನ್ನು ಸಂಪರ್ಕಿಸಬೇಕಾಗಿ ಕೋರುತ್ತೇವೆ. ಪ್ರತಿ ದಿನ ಸಂಜೆ 6ರಿಂದ 8ರ ವರೆಗೆ ಸಮಾಜಬಾಂಧವರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ವಿವರಗಳಿಗಾಗಿ ಶ್ರೀ ಕೃಷ್ಣಕುಮಾರ್ ಮಟ್ಟು (9481760611)ರವರನ್ನು ಸಂಪರ್ಕಿಸಿರಿ.

# ಸಂಪಾದಕೀಯ.....

- ಡಾ। ವೈ. ಸುದರ್ಶನ್ ರಾವ್

ಪುನಃ ಸ್ಥಾನಿಕ ಬ್ರಾಹ್ಮಣರ ಸಮಾವೇಶಕ್ಕೆ ಸಿದ್ಧತೆಗಳಾಗುತ್ತಿವೆ. ಈ ಬಾರಿಯದ್ದು ಜಾಗತಿಕ ಮಟ್ಟದ ಸಮಾವೇಶವೆಂಬ ಗರಿಯನ್ನು ತುರಾಯಿಗೆ ಸಿಕ್ಕಿಸಿಕೊಂಡಿದೆ. 2012ರಲ್ಲಿ ಉಡುಪಿಯಲ್ಲಿ ನಡೆದ ಸಮಾವೇಶದ ನಂತರ ನಡೆಯುತ್ತಿರುವ ಮೂರನೇ ಸಮಾವೇಶವಿದು

ಪದೇ ಪದೇ ಸಮಾವೇಶಗಳನ್ನು ನಡೆಸುವ ಉದ್ದೇಶ ಏನು? ಇಂತಹಾ ಸಮಾವೇಶಗಳಿಂದ ಆಗುವ ಲಾಭ ಏನು? ಈಗಾಗಲೆ ನಡೆದು ಹೋದ ಸಮಾವೇಶಗಳಿಂದ ಸಾಧಿಸಿದ್ದಾದರೂ ಏನಿದೆ? ಇದು ಸಮಾವೇಶದ ಸಂಘಟಕರನ್ನೂ ಸೇರಿಸಿ ಎಲ್ಲರ ಮನದಲ್ಲಿ ಮೂಡುವ ಪ್ರಶ್ನೆಗಳೇ ಆಗಿವೆ. ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುವುದು ಕೂಡಾ ಸಮಾವೇಶದಷ್ಟೇ ಮುಖ್ಯವಾಗಿದೆ.

ಸಮಾವೇಶದ ಹೆಸರಿನಲ್ಲಿ ಹೆಚ್ಚಿನ ಕಡೆ ನಡೆಯುತ್ತಿರುವುದಾದರೂ ಏನು? ಒಂದು ಉದ್ಘಾಟನಾ ಸಮಾರಂಭ. ಅದಕ್ಕೊಂದಿಷ್ಟು ಅತಿಥಿಗಳು. ಅವರದೊಂದಿಷ್ಟು ಉದ್ದ ಭಾಷಣ. ಭಾಷಣ ಮುಗಿಯುವುದನ್ನೇ ಕಾಯುತ್ತಾ ಕುಳಿತಿರುವ ಸಭಿಕರು, ಒಂದಿಷ್ಟು ಸಾಂಸ್ಕೃತಿಕ ಕಾರ್ಯಕ್ರಮ. ಒಂದಷ್ಟು ಜನರಿಗೆ ಸನ್ಮಾನ. ವಿಚಾರಗೋಷ್ಠಿಯ ಹೆಸರಿನಲ್ಲಿ ಕೆಲವು ಬುದ್ಧಿಜೀವಿಗಳಿಂದ ಕೊರೆತ. ಕೊನೆಗೆ ಸುಗ್ರಾಸ ಭೋಜನ. ಇವಿಷ್ಟು ಮೇಲ್ನೋಟಕ್ಕೆ ಕಾಣುವ ಸತ್ಯ. ಬರೇ ಇಷ್ಟಕ್ಕೇ ಇಷ್ಟೊಂದು ಖರ್ಚು ಮಾಡಬೇಕಿತ್ತೇ ಎಂಬ ತರ್ಕ ಕೆಲವೊಮ್ಮೆ ಹೌದೆನಿಸುವುದೂ ಸುಳ್ಳಲ್ಲ.

ನಮ್ಮ ಸಮಾಜ ಸಣ್ಣ ಸಮಾಜ. ನಮ್ಮಲ್ಲಿ ನಡೆಯುವ ಮದುವೆ ಉಪನಯನ ಇತ್ಯಾದಿ ಸಮಾರಂಭಗಳಲ್ಲೇ ಸಮಾವೇಶಕ್ಕೆ ಸೇರುವ ಎರಡರಷ್ಟು ಜನ ಸೇರುತ್ತಾರೆ. ಹಾಗಿರುವಾಗ ಕೇವಲ ಸಾವಿರದಷ್ಟು ಜನರನ್ನ ಸೇರಿಸುವುದು ಮಾತ್ರ ಸಮಾವೇಶದ ಉದ್ದೇಶ ಖಂಡಿತಾ ಅಲ್ಲ ಹಾಗೂ ಆಗಬಾರದು.

ಈ ಬಾರಿಯ ಸ್ಥಾನಿಕ ಸಮಾಜದ ಸಮಾವೇಶ ಒಂದು ಮಾದರಿಯಾದ ರೀತಿಯಲ್ಲಿ ಆಯೋಜಿಸಲ್ಪಡುತ್ತಿದೆ. ಈ ಸಮಾವೇಶದ ಮುಖ್ಯ ಉದ್ದೇಶ ಸಂಘಟನೆ. ಅದೂ ಮುಖ್ಯವಾಗಿ ನಮ್ಮ ಸಂಘಗಳನ್ನು ಸಂಘಟಿಸುವುದು ಹಾಗೂ ನಮ್ಮ ಸಮಾಜದಲ್ಲಿ ಸಂಘಟನಾ ಮನೋಭಾವವುಳ್ಳವರನ್ನು ಸಂಘಟಿಸುವುದು ಹಾಗೂ ಸಾಧ್ಯವಾದಷ್ಟು ಮಂದಿಯಲ್ಲಿ ಸಂಘಟನಾ ಮನೋಭಾವವನ್ನು ಪ್ರಚೋದಿಸುವುದು ಆಗಿದೆ. ಆ ನಿಟ್ಟಿನಲ್ಲಿ ಸಮಾವೇಶದ ಸಂಘಟಕರು ಪ್ರತಿಯೊಂದು ಊರಿನ ಸಂಘಗಳಿಗೆ ಭೇಟಿಯಿತ್ತು ಸಂಘಗಳ ಕಾರ್ಯಕರ್ತರನ್ನು ಹಾಗೂ ಪದಾಧಿಕಾರಿಗಳನ್ನು ಭೇಟಿಯಾಗುವ ಕೆಲಸವನ್ನು ಆಸ್ಥೆಯಿಂದ ಮಾಡುತ್ತಿದ್ದಾರೆ. ಈಗಾಗಲೇ ಮೂಡಬಿದ್ರೆ, ಮಂಗಳೂರು, ಪಡುಬಿದ್ರೆ ಹಾಗೂ ಬೆಂಗಳೂರಿಗೆ ಭೇಟಿಯಿತ್ತಾಗಿದೆ. ಅಮೇರಿಕಾದಲ್ಲಿನ ನಮ್ಮ ಸಂಘವನ್ನು ಸಂಪರ್ಕಿಸಿದಾಗ ಅವರ ಭಾಗವಹಿಸುವಿಕೆಯ ಬಗ್ಗೆ ಉತ್ಸಾಹದ ಸ್ಪಂದನ ದೊರೆತಿದೆ. ಆಸ್ಟ್ರೇಲಿಯಾದಲ್ಲಿರುವ ನಮ್ಮವರಿಂದಲೂ ಇದೇ ರೀತಿಯ ಪ್ರತಿಕ್ರಿಯೆ ದೊರೆತಿದೆ. ಅಮೇರಿಕಾದಲ್ಲಿರುವ ನಮ್ಮವರ ಸಾಧನೆಗಳ ಬಗ್ಗೆ ಅಲ್ಲಿಯ ಜೀವನದ ಬಗ್ಗೆ ಹಾಗೂ ಅಲ್ಲಿ ನಮ್ಮವರಿಗೆ ಇರುವ ಅವಕಾಶಗಳ ಬಗ್ಗೆ ಒಂದಷ್ಟು ಸಮಯ ಈ ಸಮಾವೇಶದಲ್ಲಿ ಮೀಸಲಿಡಲಾಗಿದೆ. ಅದೇ ರೀತಿ ಗಲ್ಫ್ ದೇಶಗಳಲ್ಲಿ ವಾಸವಾಗಿರುವ ನಮ್ಮವರನ್ನೂ ಪ್ರಥಮ ಭಾರಿಗೆ ಸಂಘಟಿಸಲಾಗುತ್ತಿದೆ. ಪ್ರತೀ ಊರಲ್ಲಿರುವ ನಮ್ಮ ಪ್ರತಿಭೆಗಳನ್ನು ಗುರುತಿಸಿ ಅವರನ್ನು ಮುಖತಃ ಸಂಪರ್ಕಿಸಿ ಅವರ ಪ್ರತಿಭೆಯನ್ನು ಸಮಾಜಕ್ಕೆ ಪರಿಚಯಿಸುವ ಪ್ರಯತ್ನ ಒಂದೆಡೆ ಸಾಗಿದೆ. ಅದೇ ರೀತಿ ನಮ್ಮ ಪರಿಚಯದಲ್ಲಿರುವ ಉದ್ಯಮಿಗಳನ್ನು ಸಂಪರ್ಕಿಸಿ ಅರ್ಹ ನಮ್ಮ ಯುವಕರಿಗೆ ನೇರವಾಗಿ ಸಂದರ್ಶನ ನಡೆಸಿ ಉದ್ಯೋಗ ಕೊಡಿಸುವ ಉದ್ಯೋಗ ಮೇಳವೂ ಈ ಸಮಾವೇಶದ ಹಿನ್ನೆಲೆಯಲ್ಲಿ ಸಾಗುತ್ತಿದೆ. ಹಾಗೆಯೇ ನಮ್ಮ ಸಮಾಜದ ಉದ್ಯಮಶೀಲ ಮನೋಭಾವದವರನ್ನು ಒಗ್ಗೂಡಿಸಿ ನಮ್ಮ ಸಮಾಜಕ್ಕೆ ಹೆಮ್ಮೆಯಾಗಬಲ್ಲಂತಹಾ ನೂರಾರು ಜನರಿಗೆ ಆಶ್ರಯದಾತವಾಗಬಲ್ಲ ಒಂದು ಸಂಸ್ಥೆಯೊಂದನ್ನು ಹುಟ್ಟುಹಾಕುವ ಪಯತ್ನಗಳೂ ಸಮಾವೇಶದ ತಯಾರಿಯ ಕೆಲಸಗಳೊಂದಿಗೆ ಸಮಾನಾಂತರವಾಗಿ ನಡೆಯುತ್ತಿದೆ.

ಹೀಗೆ ಸಮಾವೇಶದ ಸಂಘಟಕರ ಅನುಭವದಲ್ಲಿ ಹೇಳುವುದಾದರೆ ಸಮಾವೇಶದ ಲಾಭ ಸಮಾವೇಶದ ದಿನ ದೊರಕುವಂತದ್ದಲ್ಲ ಹಾಗೂ ಸಮಾವೇಶದ ಉದ್ದೇಶ ಸಮಾವೇಶದಂದು ಸಾಧನೆಯಾಗುವಂತದ್ದಲ್ಲ. ಸಮಾವೇಶದ ಉದ್ದೇಶ ಸಾಧನೆ ಹಾಗೂ ಸಮಾವೇಶದ ಲಾಭಗಳೆರಡೂ ಸಮಾವೇಶಕ್ಕಾಗಿ ಓಡಾಡುತ್ತಿರುವಾಗಲೆ ಸಿದ್ಧಿಸುತ್ತಿವೆ. ಹಾಗೂ ಈ ಪ್ರಯತ್ನಗಳು ಯಶಸ್ವಿಯಾಗಬೇಕಾದರೆ ನಮ್ಮವರೆಲ್ಲರ ಪ್ರಾಮಾಣಿಕ ಸಹಕಾರ ಬೇಕು. ಹಾಗಾಗಿ ಈ ಸಮಾವೇಶದ ಸಂಘಟಕರಾದ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಹಾಗೂ ಬೆಂಗಳೂರಿನ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದವರ ಶ್ರಮದೊಂದಿಗೆ ನಾವೆಲ್ಲ ಕೈಜೋಡಿಸೋಣ.


**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ



**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸ್ಶೆಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)





ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161 97417 85551

**ಹರಿಕೃಷ್ಣ ಡಿಜಿಟಲ್ಸ್**

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು





*With Best Compliments from :*

***Dr. Sanath S. Rao***

M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**

Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)



**With Best Compliments From :**

***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors




OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

# ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ । ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀ ಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.29-09-2019ರಿಂದ 07-10-2019ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ಸಂಜೆ ದುರ್ಗಾನಮಸ್ಕಾರ ಮತ್ತು ರಾತ್ರಿ ಗಂಟೆ 8-00ಕ್ಕೆ ವಿಶೇಷ ಪೂಜೆ ನಡೆಯಲಿರುವುದು. ನವರಾತ್ರಿಯ ಒಂಭತ್ತು ದಿನವೂ ಸಂಜೆ 6-00ರಿಂದ 8-00ರ ವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿರುವುದು. ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ.

– ಆಡಳಿತ ಮಂಡಳಿ

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸಾಂಸ್ಕೃತಿಕ ಸ್ಪರ್ಧೆಗಳು

ತಾ.08-10-2019ನೇ ಮಂಗಳವಾರ ಪೂರ್ವಾಹ್ನ ಗಂಟೆ 9.00 ರಿಂದ ನಮ್ಮ ಸಮಾಜ ಬಾಂಧವರಿಗಾಗಿ ಈ ಕೆಳಗಿನ ಸ್ಪರ್ಧೆಗಳು ನಡೆಯಲಿವೆ.

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-8ನೇ ತರಗತಿಯವರೆಗೆ | 9ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ | 4 ನಿಮಿಷ |
| | (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | | | |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಯಾವುದೇ ಚಿತ್ರ) | 5-8ನೇ ತರಗತಿಯವರೆಗೆ (ನಮ್ಮೂರ ಜಾತ್ರೆ) | 9ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ (ಪ್ರಕೃತಿ ವಿಕೋಪ) | 60 ನಿಮಿಷ |
| **ರಂಗವಲ್ಲಿ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-8ನೇ ತರಗತಿಯವರೆಗೆ | 9ನೇ ತರಗತಿಯಿಂದ ಮೇಲ್ಪಟ್ಟು ಎಲ್ಲರಿಗೂ | 60 ನಿಮಿಷ |
| | (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ-ಯಾವುದೇ ಪರಿಕರಣಗಳನ್ನು ಉಪಯೋಗಿಸಬಾರದು) | | | |
| **ಶ್ರೀ ಗಣೇಶ ಪಂಚರತ್ನ** | 4ನೇ ತರಗತಿಯವರೆಗೆ | 5-8ನೇ ತರಗತಿಯವರೆಗೆ | | |
| **ಶಂಖ ಊದುವುದು** (ಮುಕ್ತ ಅವಕಾಶ) | ಶಂಖಗಳನ್ನು ಸ್ಪರ್ಧಿಗಳೇ ತರಬೇಕು | | | |
| **ಚೂರ್ಣಿಕೆ** | ಎಲ್ಲಾ ವಯೋಮಾನದವರಿಗೆ | | | |

**ವಿಶೇಷ ಸೂಚನೆಗಳು :**

1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು, ಕಡ್ಡಾಯವಾಗಿ ಬೆಳಿಗ್ಗೆ 9-30ಕ್ಕೆ ಸ್ಪರ್ಧೆಗಳು ಪ್ರಾರಂಭವಾಗಲಿವೆ
2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾ ಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು.
3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು.
4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು.
5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

2-30ರಿಂದ ಸಭಾಕಾರ್ಯಕ್ರಮ, ಪ್ರತಿಭಾ ಪುರಸ್ಕಾರ, ಬಹುಮಾನ ವಿತರಣೆ, ವಿದ್ಯಾರ್ಥಿವೇತನ ವಿತರಣೆ ಮತ್ತು ಮಹಿಳಾ ವೇದಿಕೆಯಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿರುವುದು.

**ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇವರಿಂದ ಮಕ್ಕಳ ಯಕ್ಷಗಾನ : ‘‘ಮೈಂದ-ದ್ವಿವಿದ’’ ಹಾಗೂ ಹಿರಿಯ ಕಲಾವಿದರಿಂದ ‘‘ಮಹಾಮಂತ್ರಿ ದುಷ್ಟಬುದ್ಧಿ’’ ಸಮಯ: ಸಂಜೆ 5-00ರಿಂದ**

-ಅಧ್ಯಕ್ಷರು, ಕಲೆ ಮತ್ತು ಸಾಂಸ್ಕೃತಿಕ ವೇದಿಕೆ


SAMPATH KUMAR Mobile : 9741508881

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's


Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**



ಕಾರ್ಯಕಾರಿಣಿ ಮಂಡಳಿ ಸದಸ್ಯರು

**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com




## ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಮಂಗಳೂರು

ಅಂತರಾಷ್ಟ್ರೀಯ ಮಟ್ಟದ ಸ್ಥಾನಿಕ ಸಂಘಗಳು ಮತ್ತು ಸಂಪನ್ಮೂಲ ವ್ಯಕ್ತಿಗಳ ಒಕ್ಕೂಟದ ವತಿಯಿಂದ

ಬೆಂಗಳೂರಿನ ಕೋಡಿಗೆಹಳ್ಳಿಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಸಾನಿಧ್ಯದಲ್ಲಿ

**ತಾ.11-01-2020 ಮತ್ತು ತಾ.12-01-2020ರಂದು**

## ವಿಶ್ವ ಸ್ಥಾನಿಕ ಬ್ರಾಹ್ಮಣ ಸಮಾವೇಶ-2020

ಜರಗಲಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

**ಅಧ್ಯಕ್ಷರು ಹಾಗೂ ಪದಾಧಿಕಾರಿಗಳು**
ಅಖಿಲಭಾರತ ಸ್ಥಾನಿಕ ಬ್ರಾಹ್ಮಣ ಸಭಾ,
ಬೆಂಗಳೂರು

**ಅಧ್ಯಕ್ಷರು ಹಾಗೂ ಪದಾಧಿಕಾರಿಗಳು**
ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ),
ಮಂಗಳೂರು


*With Best Complimemts From*

SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ 2019-2020

**ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹಿಂದಿನ ತರಗತಿಯ ಅಂಕಪಟ್ಟಿಯ ಪ್ರತಿ, ಪ್ರಸ್ತುತ ವರ್ಷದ ಶಾಲೆಯಿಂದ ವ್ಯಾಸಂಗ ಪ್ರಮಾಣ ಪತ್ರ ಮತ್ತು ಬ್ಯಾಂಕಿನ ಪಾಸ್ ಪುಸ್ತಕದ ಮೊದಲನೇ ಪುಟದ ಪ್ರತಿಗಳ ದಾಖಲೆ ಸಹಿತ ಶ್ರೀ ಶಾರದಾ ಮಂಟಪದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ಫಾರಂನಲ್ಲಿ ತಾ.25-09-2019ರ ಒಳಗೆ ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-576102 ಅರ್ಜಿಯನ್ನು ಕಳುಹಿಸಿ ಕೊಡಬೇಕು.**

- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ 2019-2020

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2019-2020ನೇ** ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ಕೈಬರಹದಲ್ಲಿ ಅರ್ಜಿ ಫಾರಂ ಬರೆದು ಪೋಷಕರ ಸಹಿಯೊಂದಿಗೆ,** ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಮತ್ತಿತರ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.25-09-2019**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳೂ ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ಫೋನ್ : 0820-2522408)ಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2019-2020

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿಗಳೊಂದಿಗೆ **ತಾ.25-09-2019**ರೊಳಗೆ **ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

## ಉದಯಚಂದ್ರ ಪ್ರತಿಭಾ ಪುರಸ್ಕಾರ 2019-2020

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. **2018-19ನೇ** ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಇತ್ಯಾದಿ ದಾಖಲೆಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು ಉಡುಪಿ - 576 102** ಇಲ್ಲಿಗೆ **ತಾ.25-09-2019**ರೊಳಗೆ ಕಳುಹಿಸಿ ಕೊಡಬೇಕು.

- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.

## ಕನ್ಯಾ ಮಾಸದ ವಿಶೇಷ ದಿನಗಳು

| | |
|---|---|
| **15-09-2019** | ವರ್ಷ ಋತು, ಭಾದ್ರಪದ ಮಾಸದ ಕೃಷ್ಣಪಕ್ಷಾರಂಭ |
| **17-09-2019** | ಕನ್ಯಾ ಸಂಕ್ರಮಣ ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8-44ಕ್ಕೆ |
| **18-09-2019** | ಶುಕ್ರೋದಯ |
| **25-09-2019** | ಸರ್ವೈಕಾದಶಿ |
| **28-09-2019** | ಮಹಾಲಯ ಅಮಾವಾಸ್ಯೆ |
| **29-09-2019** | ನವರಾತ್ರಿ ಆರಂಭ ಶರದೃತು, ಆಶ್ವಯುಜ ಮಾಸದ ಶುಕ್ಲಪಕ್ಷಾರಂಭ |
| **04-10-2019** | ಶ್ರೀ ಶಾರದಾ ಪೂಜಾರಂಭ |
| **06-10-2019** | ದುರ್ಗಾಷ್ಟಮಿ |
| **07-10-2019** | ಮಹಾನವಮಿ, ಆಯುಧ ಪೂಜಾ |
| **08-10-2019** | ವಿಜಯದಶಮಿ, ಶಾರದಾ ವಿಸರ್ಜನಂ |
| **09-10-2019** | ಸರ್ವೈಕಾದಶಿ |
| **13-10-2019** | ಹುಣ್ಣಿಮೆ |
| **14-10-2019** | ಶರದೃತು, ಆಶ್ವಯುಜ ಮಾಸದ ಕೃಷ್ಣಪಕ್ಷಾರಂಭ |
| **17-10-2019** | ತುಲಾ ಸಂಕ್ರಮಣ ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8-50ಕ್ಕೆ |

# ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

## ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ತಾ.17-10-2019 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.04-10-2019 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.19-09-2019 ಮತ್ತು ತಾ.03-10-2019 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಅಕ್ಟೋಬರ್ ತಿಂಗಳ ಶಾಶ್ವತ ಸೇವಾಕರ್ತರ ವಿವರ

1 ಕುಮಾರ್ ಬೆಳ್ಳೆ, ಮುಂಬೈ
2 ಬಿ. ಸ್ವಾತಿ ರಾವ್, ಬೆಂಗಳೂರು
3 ಶೈಲ ಬೆಳ್ಳೆ, ಮುಂಬೈ
4 ಶ್ರೀ. ದತ್ತಾತ್ರೆಯ ಮತ್ತು ಶ್ರೀಮತಿ ವಿಜಯಲಕ್ಷ್ಮೀ, ಕಾಪು
5 ಬಿ. ಕೃಷ್ಣಮೂರ್ತಿ ರಾವ್, ಅಂಬಲ್ಪಾಡಿ
6 ನಾಗೇಶ್ ಕೃಷ್ಣಪ್ಪ ಸುವರ್ಣ, ಮಂಗಳೂರು
7 ಶ್ರೀಮತಿ ಸರಳ ನಾಗೇಶ್ ಕೆ.ಸುವರ್ಣ, ಮಂಗಳೂರು
8 ಹೆಚ್.ಟಿ ಶಂಕರ್ ರಾವ್, ಬಜಗೋಳಿ
9 ಎಲ್ಲೂರು ಭುವನೇಂದ್ರ ರಾವ್, ಕೊರಂಗ್ರಪಾಡಿ
10 ಎನ್.ಎ. ಪಿ. ಭಟ್, ಬನ್ನಂಜೆ
11 ಪ್ರೀತಿ ಪಿ.ಕಾಮತ್, ಮಂಗಳೂರು
12 ಬಿ.ಅನಿಲ್ ಕುಮಾರ್ ರಾವ್, ಉಡುಪಿ
13 ಶೇಷಮ್ಮ, ಮೂಡು ಅಲೆವೂರು
14 ಕೆ.ಸದಾಶಿವ ಉಪಾಧ್ಯಾಯ, ಕಟೀಲ್
15 ಪಿ. ವೆಂಕಟ ರಾವ್, ಬೆಂಗಳೂರು
16 ನಿಖಿತ ಆರ್ ಪೇಜಾವರ್, ಮಂಗಳೂರು
17 ಗೋಪಾಲ ರಾವ್ ಉದ್ಯಾವರ, ಬೆಂಗಳೂರು
18 ವಸುಮತಿ ಕಿಶೋರ್ ಕುಮಾರ್, ಮುಂಬೈ
19 ಟಿ. ಮಹಾಲಕ್ಷ್ಮೀ, ಮಂಗಳೂರು
20 ಅಶ್ವಿನಿ ಸಂಜಯ್, ಮಂಗಳೂರು
21 ಹೆಚ್. ನಿರಂಜನ್ ಭಟ್, ಕುಂಜಿಬೆಟ್ಟು
22 ಶಾಂತಿ ಜೆ.ನಾಯಕ್, ಪಟ್ಲ
23 ಎ. ರಘುಪತಿ ರಾವ್, ಮುಂಬೈ
24 ಭಾಗ್ಯಶ್ರೀ ಜೀವನ್ ಪ್ರಕಾಶ್, ಹೆರ್ಗ
25 ಮಹೇಶ್ ಮತ್ತು ಶ್ರೀಮತಿ ಜಯಶ್ರೀ, ವಿಟ್ಲ
26 ವೈ. ಚಂದ್ರಶೇಖರ್ ರಾವ್, 76 ಬಡಗಬೆಟ್ಟು
27 ಸ್ನೇಹ, ಬಾರ್ಕೂರು
28 ನಂದಳಿಕೆ ಚಂದ್ರಶೇಖರ್ ರಾವ್
29 ಜಯಂತ್ ನಾಯಕ್, ಪಟ್ಲ
30 ಕೃಷ್ಣ ಪೈ, ಮುಂಬೈ
31 ಡಾ|.ವಿ. ವಿಠ್ಠಲ್ ರಾವ್, ಮಣಿಪಾಲ
32 ಕೃಷ್ಣಕುಮಾರ್, ಮಟ್ಟು
33 ಪ್ರಸಾದ್, ತೋಕೂರು
34 ಕ್ಷಮಾ, ಮುಂಬೈ
35 ಬಿ. ರವೀಂದ್ರನಾಥ್ ರಾವ್, ಬೆಂಗಳೂರು
36 ಎನ್.ಡಿ ಜಗನ್ನಾಥ ರಾವ್, ಬೆಂಗಳೂರು
37 ಪುಲ್ಕೇರಿ ಸ್ಮಿತಾ ಕಾಮತ್, ಕಾರ್ಕಳ

## ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

ಕೋಂ.ಕೆ. ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ-575019. ಮೊ : 8762235801.

2018-19ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯು.ಸಿ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ದಿನಾಂಕ 20-10-2019 ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ದಿನಾಂಕ 30-09-2019ರ ಒಳಗಡೆ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**-ಕೆ. ಸದಾಶಿವ ಶಾಸ್ತ್ರಿ**

Ph : 98459 92859

Ganesh Hebbar & Associates

CHARTERED ACCOUNTANT

S.M.S.P. Complex, Udupi - 576 101.




RAJESH POWER PRESS

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.

Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS



ಎಮ್. ದೇವಾನಂದ್ ಭಟ್ Cell : 9845644556 9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಪಡುಬಿದ್ರಿಯಲ್ಲಿ ಸೋಣಡೊಂಜಿ ದಿನ



ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ ಇದರ ಮಹಿಳಾ ವೇದಿಕೆಯ ವತಿಯಿಂದ ವರ್ಷಂಪ್ರತಿ ನಡೆಯುವ "ಸೋಣಡೊಂಜಿ ದಿನ" ಸಮಾರಂಭವು ದಿನಾಂಕ 18.08.2019ನೇ ರವಿವಾರ ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಾಲಯದ ಪ್ರಾಂಗಣದಲ್ಲಿ ನಡೆಯಿತು. ದೇವರಿಗೆ ಸಾಮೂಹಿಕ ಪ್ರಾರ್ಥನೆಯನ್ನು ಸಲ್ಲಿಸುವುದರೊಂದಿಗೆ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಹಿರಿಯ ಮುತ್ತೈದೆಯರು ವೇದಿಕೆಯಲ್ಲಿರುವ ದೀಪವನ್ನು ಬೆಳಗಿಸಿದರು. ಶ್ರೀಮತಿ ವಿಜಯ ವಲ್ಲಿ ರಾಜಶೇಖರ್ ರಾವ್ ಪ್ರಾರ್ಥನೆಯನ್ನು ಹಾಡಿದರು. ಬಳಿಕ ವಿದುಷಿ ಡಾ। ಭಾಗ್ಯಶ್ರೀ ಗುರುಪ್ರಸಾದ್ ಇವರು ತಮ್ಮ ಭರತನಾಟ್ಯದ ಮೂಲಕ ವಿಘ್ನನಿವಾರಕ ಗಣೇಶನನ್ನು ನಮಿಸಿದರು. ಸಭಾಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಕೆಮ್ಮಣ್ಣಿನ ಶ್ರೀಮತಿ ಪದ್ಮಿನಿ ಅನಿಲ್‌ಕುಮಾರ್ ಅಲಂಕರಿಸಿದರು. ಮುಖ್ಯ ಅತಿಥಿಯಾಗಿ ಶ್ರೀಮತಿ ಸೀತಾದೇವಿ ಭಾಸ್ಕರ್ ರಾವ್ ಭಾಗವಹಿಸಿದರು. ಅಲ್ಲದೇ ಮಹಿಳಾ ವೇದಿಕೆಯ ಅಧ್ಯಕ್ಷೆಯಾದ ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ ರಾವ್ ಇನ್ನ, ಸಂಘದ ನಿರ್ದೇಶಕರಾದ ಶ್ರೀಮತಿ ವೇದಾವತಿ ದಿವಾಕರ ರಾವ್, ಮಹಿಳಾ ವೇದಿಕೆಯ ಸಂಚಾಲಕಿ ಸಾವಿತ್ರಿ ಅರವಿಂದ ರಾವ್ ಮತ್ತು ಕಾರ್ಯದರ್ಶಿ ಶ್ರೀಮತಿ ಸುಮಂಗಲಾ ನಯನಾಭಿರಾಮ ಸ್ವಾಮಿ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಪವಿತ್ರಾ ಕೃಷ್ಣರಾವ್ ಇವರು ಸ್ವಾಗತಿಸಿದರು. ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ್ ಇವರು ಮಹಿಳಾ ವೇದಿಕೆಯ ಉದ್ದೇಶ ಹಾಗೂ ಸಾಧನೆಯ ಬಗ್ಗೆ ತಿಳಿಸಿದರು. ಮುಖ್ಯ ಅತಿಥಿಗಳಾದ ಶ್ರೀಮತಿ ಸೀತಾದೇವಿ ಭಾಸ್ಕರ್ ರಾವ್ ಇವರು 'ಸೋಣ ತಿಂಗಳ ಸಂಭ್ರಮ', ಸೋಣ ತಿಂಗಳಲ್ಲಿ ಬರುವ ಹಬ್ಬಗಳು ಮತ್ತು ಆಚರಣೆಯ ಕ್ರಮಗಳ ಬಗ್ಗೆ ವಿವರಣೆ ನೀಡಿದರು. ಬಳಿಕ ನಮ್ಮ ಸಂಘದ ವ್ಯಾಪ್ತಿಗೆ ಒಳಪಟ್ಟ ಹಿರಿಯ ಮಹಿಳೆಯರನ್ನು ಗೌರವಿಸುವ ಕಾರ್ಯಕ್ರಮ ನಡೆಯಿತು. ಇದರಂತೆ ಸುಮಾರು 8 ಜನ ಹಿರಿಯ ಮಾತೆಯರನ್ನು ಸೀರೆ, ಫಲ, ಪುಷ್ಪಗಳನ್ನಿತ್ತು ಗೌರವಿಸಲಾಯಿತು. ಗೌರವಾನ್ವಿತರ ಪರವಾಗಿ ಹೆಜಮಾಡಿಯ ಶ್ರೀಮತಿ ಶಕುಂತಲಾ ಗೋವಿಂದ ರಾವ್ ತಮ್ಮ ಅನಿಸಿಕೆಯಲ್ಲಿ ನಿವೃತ್ತ ಜೀವನದ ಕಾಲವನ್ನು ಭಗವಂತನ ಧ್ಯಾನದಿಂದ ಹೇಗೆ ಸದೃಢಗೊಳಿಸಬಹುದೆಂದು ತಿಳಿಸಿ ಶುಭ ಹಾರೈಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪಡುಬಿದ್ರಿಯ ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯಸಾಧನೆಯ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಕೊನೆಯಲ್ಲಿ ಶ್ರೀಮತಿ ಸುಮಂಗಲಾ ನಯನಾಭಿರಾಮ ಸ್ವಾಮಿ ಧನ್ಯವಾದವಿತ್ತರು. ಮುಂಡ್ಕೂರಿನ ಶ್ರೀಮತಿ ರಮ್ಯ ಅರುಣ್ ರಾವ್ ಕಾರ್ಯಕ್ರಮ ನಿರೂಪಿಸಿದರು.

ಈ ಕಾರ್ಯಕ್ರಮದ ಬಳಿಕ ಬೆಂಗಳೂರಿನಲ್ಲಿ ಜನವರಿ 11, 12 ರಂದು ನಡೆಯಲಿರುವ ವಿಶ್ವ ಸ್ಥಾನಿಕ ಬ್ರಾಹ್ಮಣ ಸಮಾವೇಶದ ಬಗ್ಗೆ ವಿವರಣೆ ನೀಡಲು ಸ್ಥಾನಿಕ ಬ್ರಾಹ್ಮಣ ಮಹಾ ಮಂಡಲದ ಆಡಳಿತ ಮಂಡಳಿಯವರು ಆಗಮಿಸಿದ್ದರು. ಉಡುಪಿಯ ಶ್ರೀಯುತ ಸಿ. ಸರ್ವೋತ್ತಮ ರಾವ್, ಡಾ। ಸುದರ್ಶನ್ ರಾವ್, ಪುತ್ತೂರಿನ ಶ್ರೀಯುತ ಜಗನ್ನಿವಾಸ ರಾವ್, ಮೂಡಬಿದ್ರಿಯ ಶ್ರೀಯುತ ದೇವಾನಂದ ಭಟ್ ಈ ಸಮಾವೇಶದ ಉದ್ದೇಶ ಹಾಗೂ ಉಪಯೋಗಗಳ ಬಗ್ಗೆ ಮಾತನಾಡಿದರು. ಈ ಎಲ್ಲಾ ಕಾರ್ಯಕ್ರಮ ಗಳ ಬಳಿಕ 'ಸೋಣಡೊಂಜಿ ದಿನ' ಸಮಾರಂಭದ ಭೋಜನಕೂಟವು ನಡೆಯಿತು. ಮಹಿಳೆಯರೇ ಖುದ್ದಾಗಿ ಮನೆಯಲ್ಲಿ ತಯಾರಿಸಿದ ಸುಮಾರು 25 ಬಗೆಯ ಭಕ್ಷ್ಯ ಭೋಜನಗಳನ್ನು ಸುಮಾರು 350 ಕ್ಕೂ ಮಿಕ್ಕಿದ ಸಮಾಜ ಬಾಂಧವರು ತಿಂದು ತೃಪ್ತಿಗೊಂಡ ಈ ಸಮಾರಂಭವು ಸಮಾಜಬಾಂಧವರು ಸೇರಿ ನಡೆಸಿದ ಹಬ್ಬವೆಂದರೆ ತಪ್ಪಲ್ಲ.

# ಶ್ರೀ ನೃತ್ಯ ಕಲಾಕೇಂದ್ರದ ಪ್ರಥಮ ವಾರ್ಷಿಕೋತ್ಸವ



ಪಡುಬಿದ್ರೆಯ ಖ್ಯಾತ ಯುವ ವೈದ್ಯ ಡಾ ಗುರುಪ್ರಸಾದ್ ಇವರ ಪತ್ನಿ ಖ್ಯಾತ ಭರತನೃತ್ಯ ಕಲಾವಿದೆ ಡಾ। ವಿದುಷಿ ಭಾಗ್ಯಶ್ರೀ ಇವರು ಸ್ಥಾಪಿಸಿದ ನೃತ್ಯ ಕಲಾ ಸಂಸ್ಥೆ ಶ್ರೀ ನೃತ್ಯ ಕಲಾ ಕೇಂದ್ರದ ಪ್ರಥಮ ವಾರ್ಷಿಕೋತ್ಸವವು ತಾ 01-09-2019ರಂದು ಪಡುಬಿದ್ರೆಯಲ್ಲಿ ನೆರವೇರಿತು. ಶ್ರೀ ಪಡುಬಿದ್ರೆ ವಾಸುದೇವ ರಾವ್, ಮೈಸೂರಿನ ನಾಟ್ಯಾಚಾರ್ಯ ಶ್ರೀ ಕೆ. ರಾಮಮೂರ್ತಿ ರಾವ್ ಹಾಗೂ ಪಡುಬಿದ್ರೆಯ ಯಕ್ಷಗಾನ ಕಲಾವಿದ ಶ್ರೀ ಜಗಧಾಭಿರಾಮ ಸ್ವಾಮಿ ಉಪಸ್ಥಿತರಿದ್ದರು. ಡಾ। ಭಾಗ್ಯಶ್ರೀ ಮತ್ತು ಶಿಷ್ಯರಿಂದ ನೃತ್ಯರೂಪಕ ದಶಾವತಾರಂ ಪ್ರದರ್ಶನಗೊಂಡಿತು.

ಶ್ರೀ ಕ್ಷೇತ್ರ ಉದಯಾದ್ರಿ

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ

**ಉದಯಾದ್ರಿ, ಪಡುಬಿದ್ರಿ, ಉಡುಪಿ ಜಿಲ್ಲೆ-574111**

## ನವರಾತ್ರಿ ಮಹೋತ್ಸವದ ಆಮಂತ್ರಣ ಪತ್ರಿಕೆ

ಪ್ರಿಯರೇ,

**ಶ್ರೀ ಪ್ರಸನ್ನ ಪಾರ್ವತಿ ದೇವಿಯ ಸನ್ನಿಧಾನದಲ್ಲಿ ನವರಾತ್ರಿ ಮಹೊತ್ಸವ ಅಂಗವಾಗಿ ತಾ. 29-09-2019ನೇ ಆದಿತ್ಯವಾರದಿಂದ ತಾ. 07-10-2019ನೇ ಸೋಮವಾರದ ವರೆಗೆ ಪ್ರತಿ ದಿನ ರಾತ್ರಿ ಗಂಟೆ 7-30ಕ್ಕೆ**

## ವಿಶೇಷ ದುರ್ಗಾ ಪೂಜಾ

**ಹಾಗೂ ತಾ.06-10-2019ನೇ ಆದಿತ್ಯವಾರ ದುರ್ಗಾಷ್ಟಮಿಯಂದು ಶ್ರೀ ಕ್ಷೇತ್ರದಲ್ಲಿ**

## ಶ್ರೀ ಚಂಡಿಕಾ ಹೋಮವು

ಸಂಪನ್ನಗೊಳ್ಳಲಿರುವುದು.

ಶ್ರೀ ಗುರುದೇವತಾನುಗ್ರಹದಿಂದ ನೆರವೇರಲಿರುವ ಈ ದೇವತಾ ಕಾರ್ಯಗಳಲ್ಲಿ ತಾವೆಲ್ಲರೂ ಭಾಗವಹಿಸಿ, ಸಿರಿಮುಡಿ ಗಂಧಪ್ರಸಾದಗಳನ್ನು ಸ್ವೀಕರಿಸಿ, ಶ್ರೀ ದೇವಿಯ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಜಗದಾಭಿರಾಮ ಸ್ವಾಮಿ**
ಪ್ರಧಾನ ಅರ್ಚಕರು

**ಪಿ. ರಘುವೀರ ರಾವ್**
ಅಧ್ಯಕ್ಷರು

**ಕರುಣಾಕರ್ ಬೆಳ್ಳೆ**
ಗೌರವ ಅಧ್ಯಕ್ಷರು

**ಶ್ರೀನಿವಾಸ ಶರ್ಮ, ಪಾದೆಬೆಟ್ಟು**
ಕಾರ್ಯದರ್ಶಿ (9945933363)

**ಪಿ. ಡಿ. ಶೇಖರ ರಾವ್**
ಖಜಾಂಚಿ

**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಟೆಂಪಲ್ ಟ್ರಸ್ಟ್ (ರಿ.)**
**ಮತ್ತು ಸರ್ವಸದಸ್ಯರು, ಊರ ಹತ್ತು ಸಮಸ್ತರು**

**ಸೇವಾದರ : ದುರ್ಗಾ ಪೂಜಾ ರೂ.300, ಚಂಡಿಕಾಯಾಗ ಸೇವಾ ಬಾಬ್ತು ರೂ.200**

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ **2019-20ನೇ** ಸಾಲಿನ **ದಿ। ಡಾ.ವೈ.ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿ** ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ। ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿಯೂ** ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ **ದಿನಾಂಕ 30-11-2019**. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ। ವೈ.ಸುದರ್ಶನ ರಾವ್,**
**ಕೆನರಾಹೆಲ್ತ್‌ಸೆಂಟರ್, ಅಂಜುಮಾನ್ ರಸ್ತೆ, ಸಿಟಿಬಸ್ಸ್ಟ್ಯಾಂಡ್ ಬಳಿ, ಉಡುಪಿ-576101**

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯೆಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

# "ಕೇದಾರ ಯಾತ್ರೆಯ ಮಧ್ಯದಲ್ಲಿ"

ನನ್ನ ವಯಸ್ಸು 80 ರ ಹತ್ತಿರವಿದ್ದರೂ 50 ರ ಹುಮ್ಮಸ್ಸಿನವರಂತೆ ಕೇದಾರ ಯಾತ್ರೆಗೆ ಹೊರಟೇ ಬಿಟ್ಟೆ. ನೇರವಾಗಿ ಆಕಾಶಕ್ಕೆ ಏರುವ-ಇಳಿಯುವ ವಿಮಾನ (ಹೆಲಿಕಾಪ್ಟರ್) ದಲ್ಲಿ ಗೌರಿಕುಂಡ ಎಂಬಲ್ಲಿಂದ ಕೇದಾರೇಶ್ವರನ ಸನ್ನಿಧಿಗೆ ಇದೆಯೆಂಬ ಆಶ್ವಾಸನೆಯಿಂದ ಮಂಗಳೂರಿನ ಪ್ರಸಿದ್ಧ ಪ್ರವಾಸಿ ಸಂಸ್ಥೆಯಲ್ಲಿ ಪತ್ನಿ ಹಾಗೂ ಇತರ ಸಂಬಂಧಿಗಳಾದ ಬಿ.ಕೆ.ಲಕ್ಷ್ಮೀನಾರಾಯಣ ರಾವ್, ಶ್ರೀಮತಿ ಸುಜಾತ, ಪ್ರವೀಣ್, ಸಕ್ಕಟ್ಟು ಜಯರಾಮ ರಾವ್, ಶ್ರೀಮತಿ ಶಾಂಭವಿ ರಾವ್ ಇವರೊಂದಿಗೆ ಕಳೆದ ಜುಲೈ 4 ರಂದು ನವದೆಹಲಿಗಾಗಿ ಪ್ರಯಾಣ ಬೆಳೆಸಿದೆ. ಮುಖ್ಯವಾಗಿ, ನಾನು ಉತ್ತರ ಭಾರತದ ಆಗ್ರಾದಲ್ಲಿ ಬ್ಯಾಂಕ್ ಕೆಲಸದಲ್ಲಿದ್ದರೂ, ಗಯಾಕ್ಷೇತ್ರ-ಕೇದಾರ-ಬದ್ರಿ ನೋಡಿರಲಿಲ್ಲ. ಬಾಕಿ ಕ್ಷೇತ್ರಗಳಿಗೆ ಪ್ರವಾಸ ಕೈಗೊಂಡಿದ್ದರೂ ನನ್ನ ಮುಖ್ಯ ಗುರಿ 'ಗಯಾಕ್ಷೇತ್ರ'ದಲ್ಲಿ ನನ್ನನ್ನಗಲಿದ ಹಿರಿಯ ಕಿರಿಯರಿಗೆ ಕ್ಷೇತ್ರ ವಿಧಿಯಂತೆ ಶ್ರಾದ್ಧಾದಿ-ಕರ್ಮಾಂಗಗಳನ್ನು ನೆರವೇರಿಸುವುದಾಗಿತ್ತು. ಅಲ್ಲಿ ಗಂಗಾತೀರದ ಕರ್ನಾಟಕ ಭವನದಲ್ಲಿ ಈ ಕಾರ್ಯಗಳನ್ನು ನಮ್ಮ ಊರಿನಿಂದ ವಲಸೆ ಹೋದ ಷೋಡಶಿ ನಾರಾಯಣಾಚಾರ್ಯ ಕುಟುಂಬದ ಪುರೋಹಿತರೋರ್ವರು ಅಚ್ಚುಕಟ್ಟಾಗಿ ನೆರವೇರಿಸಿದರು. ಹವಿಸ್ಸಿನಿಂದ 108 ಪಿಂಡಗಳನ್ನು ತಯಾರಿಸಿ ಅಗಲಿದವರನ್ನು ಸ್ಮರಿಸುತ್ತಾ ಪಿಂಡಾರ್ಪಣೆ ಮಾಡಿ 3 ಪತ್ರಾವಳಿ ಎಲೆಗಳಲ್ಲಿ 36 ರಂತೆ ಕಪಿಲಾ ನದಿ, ವಿಷ್ಣುಪಾದ ಹಾಗೂ ಪುರಾಣ ಪ್ರಸಿದ್ಧ "ವಟವೃಕ್ಷ"ಕ್ಕೆ ಸಮರ್ಪಿಸುವುದರೊಂದಿಗೆ ಪಿಂಡ ವಿಸರ್ಜನಾ ಕ್ರಮ ಮುಗಿಸಿ ಪುರೋಹಿತರ ಛತ್ರಕ್ಕೆ ಹಿಂತಿರುಗಿದೆವು. ಪುರೋಹಿತರು ಮಂತ್ರಾಕ್ಷತೆ ಕೊಡುತ್ತಾ "ಇನ್ನು ಮುಂದಕ್ಕೆ ವರ್ಷಾವಧಿ ಶ್ರಾದ್ಧಾದಿ ಕರ್ಮಾಂಗಗಳ ಅವಶ್ಯಕತೆ ಇಲ್ಲ. ನಿಮ್ಮನ್ನಗಲಿದ ಹಿರಿಯ-ಕಿರಿಯ ಆತ್ಮಗಳಿಗೆ ಸಂತೃಪ್ತಿಯಾಗಿ ವಿಷ್ಣುಲೋಕ ಪ್ರಾಪ್ತಿಯಾಯ್ತು" ಎಂದು ಹೇಳಿ ಹರಸಿದರು. ಹಾಗೆಂದು, ಕಾಶಿ ಪ್ರಯಾಗದಲ್ಲಿ ಪಿಂಡಪ್ರಧಾನ ಮಾಡಿದವರಿಗೆ (ಎರಡೂ ಕಡೆ ಗೋಕರ್ಣಮಂತ ಕೊರಾಣಿ ಪುರೋಹಿತರು). ಊರಲ್ಲಿ ಶ್ರಾದ್ಧಾದಿ ಕರ್ಮಾಂಗಗಳನ್ನು ಮುಂದಕ್ಕೂ ಮಾಡಬಹುದೆಂದು ಸಲಹೆಕೊಟ್ಟರಂತೆ. ಈ ದ್ವಂದ್ವ ಅಭಿಪ್ರಾಯಗಳು ಅವರವರ ಆಚಾರ-ವಿಚಾರಕ್ಕೆ ಬಿಟ್ಟದ್ದು.

ಈ ಮಧ್ಯೆ ಪ್ರಯಾಣದಲ್ಲಿ ಅರೆಬೆಂದ ಅನ್ನ ಉಂಡು, ನನ್ನ ಆರೋಗ್ಯ ಏರುಪೇರಾಯ್ತು. ಎರಡು ಮೂರು ದಿನ 'ಮಿಕ್ಸಿ'ಯಲ್ಲಿ ಅರೆದು ಗಂಜಿ ಮಾಡಿ ಕುಡಿದರೂ ಬಹಳ ನಿತ್ರಾಣವಾಗಿ ಒಟ್ಟು 19 ದಿನಗಳ ಪ್ರಯಾಣದಲ್ಲಿ 9 ದಿನ ಮುಗಿಸಿ ಹಿಂದಿರುಗುವ ನಿಶ್ಚಯ ಮಾಡಿದೆ. ಎರಡನೇ ಹಂತದ ಪ್ರಯಾಣಕ್ಕೆ, ನನ್ನ ಸಂಬಂಧಿಕರು ಸೇರಿ ಸುಮಾರು 20-25 ಮಂದಿ ದಿಲ್ಲಿಯಿಂದ ಹರಿದ್ವಾರ-ಹೃಷಿಕೇಶ-ಸೀತಾಪುರ-ಗೌರಿಕುಂಡ-ಕೇದಾರ-ಬದ್ರಿನಾಥಕ್ಕೆ ಪ್ರವಾಸ ಮುಂದುವರಿಸಿದರು. ನಾವು ಸತಿ-ಪತಿಗಳು ದಿಲ್ಲಿಯಿಂದ ಹೈದ್ರಾಬಾದ್-ಮಂಗಳೂರಿಗಾಗಿ ಉಡುಪಿ ತಲುಪಿದೆವು. ಆರೋಗ್ಯ ಕೆಡಿಸಿಕೊಂಡು ಪೂರಾ ಕಂಗಲಾಗಿ ಉಳಿದ ಸಂಬಂಧಿಗಳಿಗೆ ಮುಜುಗರವಾಗುವುದಕ್ಕಿಂತ, ಹಿಂತಿರುಗಿದ್ದೇ ಹಿತವೆನಿಸಿತು.

ಹಾಗೆಂದು ಸಹಪ್ರವಾಸಿಗರಲ್ಲಿ ನಾವೀರ್ವರು ಹಿರಿಯರಾಗಿದ್ದರಿಂದ, ನಮಗೆ ಕೊಟ್ಟ ಆದ್ಯತೆ-ಪ್ರೀತಿ ಗೌರವಕ್ಕೆ ಸ್ಪಂದಿಸಿ, ಅವರೆಲ್ಲರ (ಪ್ರವಾಸಿ ಸಂಸ್ಥೆಯ ಸಿಬ್ಬಂದಿ ಸಹಿತ) ಪ್ರೀತಿಯ ಗೋಪಜ್ಜ-ಗೋಪಜ್ಜಿಯಾದೆವು. ಕಡೆಗೂ, ಉಳಿದ ಪ್ರವಾಸಿಗರಿಗೆ ಕೇದಾರನಾಥ ದರ್ಶನಭಾಗ್ಯ ಸಿಗಲಿಲ್ಲವಂತೆ! ಕಾರಣ, ಹೆಲಿಕಾಪ್ಟರ್‌ಗಳು ತಮ್ಮ ಪ್ರಯಾಣವನ್ನು ಸ್ಥಗಿತಗೊಳಿಸಿದ್ದವು. (ಹವಾಮಾನ ವೈಪರೀತ್ಯವಂತೆ). ಪೋನಿ (ಹೇಸರಗತ್ತೆ ಕುದುರೆ) ದಂಡಿ (ಧೋಲಿ) ಸವಾರಿ ಕೂಡ ಕಡಿತಗೊಂಡಿತ್ತಂತೆ. ಪ್ರವಾಸಿ ಸಂಸ್ಥೆ ಈ ವಿಷಯಗಳನ್ನು ಅಧ್ಯಯನ ಮಾಡದೆ ಈ ಮಳೆಗಾಲದ ಜುಲೈ ತಿಂಗಳಲ್ಲಿ ಪ್ರವಾಸ ಏರ್ಪಡಿಸಿದ್ದೇ 'ತಪ್ಪು' ಎಂಬ ಅಭಿಪ್ರಾಯ ಪ್ರವಾಸಿಗರದ್ದಾಗಿತ್ತು. ಕಾಶಿಯಲ್ಲಿ 'ಗಂಗಾಸ್ನಾನ'ದ ನಂತರ "ಉಟ್ಟಬಟ್ಟೆ" ವಿಸರ್ಜಿಸಿ ಶ್ರೀ ವಿಶ್ವನಾಥ ವಿಶಾಲಾಕ್ಷಿ-ಅನ್ನಪೂರ್ಣೆಯ ದರ್ಶನ ಮಾಡಬೇಕೆಂಬ ನಿಯಮವಂತೆ. ಈಗ ಪರಿಸರ ಮಾಲಿನ್ಯ ನಿಯಂತ್ರಣಗಳಂತೆ "ವಿಸರ್ಜನೆ" ನಿಷಿದ್ಧ. ನಾನು ನನ್ನವಳು ಗಂಗೆಯಲ್ಲಿ ಮುಳುಗೇಳುತ್ತಾ, ಅವಳು ಚಪ್ಪಲಿ ನಾನು ಕನ್ನಡಕ ಕಳಕೊಂಡ ಭ್ರಮೆಯಲ್ಲಿ ನೀರಿನಲ್ಲಿ ಸ್ವಲ್ಪ ಹೊತ್ತು ಹುಡುಕಾಡಿದ್ದೇ ಬಂತು. "ಹೋದರೆ ಹೋಗಲಿ, ಬಟ್ಟೆ ಬದಲು ಇದೇ ವಿಸರ್ಜನೆಯಾಗಲಿ" ಎಂದು ಹೇಳಿ ಹಿಂತಿರುಗುವಾಗ ಮೆಟ್ಟಲು ಇಳಿಯುವಲ್ಲಿ ಅವಳ ಚಪ್ಪಲಿ ಬಿದ್ದಿತ್ತು ಹಾಗೂ ನನ್ನ ಕನ್ನಡಕ ಸಂಬಂಧಿಕರ ಕಣ್ಣ ಮೇಲೆ ವಿರಾಜಿಸುತ್ತಿತ್ತು. ಮುಳುಗುವ ಮೊದಲು ಅವರ ಕೈಗೆ ಕೊಟ್ಟದ್ದು ಮರೆತಿತ್ತು. ಗಂಗಾಸ್ನಾನ ವಿಶ್ವನಾಥನ ದರ್ಶನ, ರಾತ್ರಿಯೆ ಗಂಗಾ ಪೂಜೆಯ ವೀಕ್ಷಿಸಿ ಧನ್ಯರಾದೆವು. ಈ ಪ್ರವಾಸಿ ಸಂಸ್ಥೆ, ಈ ಸಲ ಎಲ್ಲೋ ಸ್ವಲ್ಪ ಅವಸರ ಪಟ್ಟು ಎಡವಿದೆ. ಹಾಗೆಯೇ, ನನ್ನ ಮುಂದಿನ ಪ್ರವಾಸಕ್ಕೆ ಅವರಿಗೆ ಆದ್ಯತೆ ಇದೆ! ಪ್ರವಾಸಿಗರು, ಅದರಲ್ಲೂ ವಯಸ್ಸಾದವರು ಆಲೋಚಿಸಿ, ಹವಾ ವೈಪರೀತ್ಯದ ಬಗ್ಗೆ ವಿಚಾರಿಸಿ ಪ್ರಯಾಣಿಸಿ. ಪ್ರವಾಸ-ಪ್ರಯಾಸವಾಗಿದ್ದರೂ-ಮನಸ್ಸು ವಿಕಾಸಗೊಳ್ಳುವುದರಲ್ಲಿ ಸಂಶಯವಿಲ್ಲ!

**ಲೇಖಕ : ಜೆ.ಕೆ ಕೋಲ್ಪೆ**

# ಮಹಾಮಂಡಲದ ಸಭೆ



2020 ನೆ ಇಸವಿ ಜನವರಿ 11 ಹಾಗೂ 12ರಂದು ಬೆಂಗಳೂರಿನಲ್ಲಿ ನಡೆಯಲಿರುವ ಜಾಗತಿಕ ಮಟ್ಟದ ಸ್ಥಾನಿಕ ಬ್ರಾಹ್ಮಣರ ಸಮಾವೇಶದ ನಿಮಿತ್ತ ಮಹಾಮಂಡಲದ ಸಭೆಯು ಅಲ್ಲಲ್ಲಿ ಜರುಗುತ್ತಿದೆ. ತಾ.11-08-2019ರಂದು ಮೂಡಬಿದರೆಯಲ್ಲಿ ತಾ.18-08-2019ರಂದು ಪಡುಬಿದ್ರೆಯಲ್ಲಿ ಹಾಗೂ ತಾ.01-09-2019ರಂದು ಮಂಗಳೂರಿನಲ್ಲಿ ಆಯಾ ಊರಿನ ಸಮಾಜಬಾಂಧವರು ಹಾಗೂ ಸಂಘದ ಪದಾಧಿಕಾರಿಗಳನ್ನು ಉದ್ದೇಶಿಸಿ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಜಗನ್ನಿವಾಸ ರಾವ್, ಕಾರ್ಯದರ್ಶಿ ದೇವಾನಂದ ಭಟ್, ಉಪಾಧ್ಯಕ್ಷ ಡಾ| ವೈ. ಸುದರ್ಶನ ರಾವ್, ಕೋಶಾಧಿಕಾರಿ ಶ್ರೀ ಉದಯಕುಮಾರ್ ಹಾಗೂ ಜತೆ ಕಾರ್ಯದರ್ಶಿ ಶ್ರೀ ಬಿ. ಕೆ. ಧನಂಜಯ ಕುಮಾರ್ ಮಾತನಾಡಿ ಅಭಿಪ್ರಾಯಗಳನ್ನು ಪಡೆದುಕೊಂಡರು. ಸ್ಥಾಪಕಾಧ್ಯಕ್ಷ ಶ್ರೀ ಸಿ.ಎಸ್.ರಾವ್ ಉಪಸ್ಥಿತರಿದ್ದರು.

# ಮೂಡಬಿದರೆ ಸಂಘದ ಪದಗ್ರಹಣ ಸಮಾರಂಭ



ತಾ.11-08-2019ರಂದು ಮೂಡಬಿದರೆಯಲ್ಲಿ ಆದಿಶಂಕರ ಬ್ರಾಹ್ಮಣ ಪರಿಷತ್ತಿನ ನೂತನ ಆಡಳಿತ ಮಂಡಳಿಯ ಪದಗ್ರಹಣ ಸಮಾರಂಭ ನೆರವೇರಿತು. ಉಡುಪಿ ಸಂಘದ ಸಲಹೆಗಾರರಾದ ಶ್ರೀ ಸಿ.ಎಸ್.ರಾವ್ ದೀಪಬೆಳಗಿಸಿ ಉದ್ಘಾಟಿಸಿ ಶುಭ ಹಾರೈಸಿದರು. ಡಾ| ವೈ.ಸುದರ್ಶನ್ ರಾವ್ ಪ್ರಮಾಣವಚನ ಬೋಧಿಸಿದರು. ಮಹಾಮಂಡಲದ ಅಧ್ಯಕ್ಷರಾದ ಶ್ರೀ ಎನ್ ಕೆ ಜಗನ್ನಿವಾಸ ರಾಯರು ಮಹಾಮಂಡಲದ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು ಮೂಡಬಿದ್ರೆ ಸಂಘದ ಅಧ್ಯಕ್ಷರಾದ ಶ್ರೀ ದೇವಾನಂದ ಭಟ್ ಸ್ವಾಗತಿಸಿದರು. ಕಾರ್ಯದರ್ಶಿ ಕಾರ್ಯಕ್ರಮ ನಿರೂಪಿಸಿದರು. ಪೂರ್ವಾಧ್ಯಕ್ಷ ಶ್ರೀ ಬೊಕ್ಕಸ ಚಂದ್ರಶೇಖರ ರಾವ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ರೀ ಬೊಕ್ಕಸ ಚಂದ್ರಶೇಖರ ರಾವ್ ಹಾಗೂ ಶ್ರೀ ನಂದಿಕೂರು ಜನಾರ್ಧನ ರಾಯರು ಮಹಾಮಂಡಲದ ಖಾಯಂ ಸದಸ್ಯರಾದ ನಿಮಿತ್ತ ಅವರನ್ನು ಹೂಗುಚ್ಛ ನೀಡಿ ಬರಮಾಡಿಕೊಳ್ಳಲಾಯಿತು.

## ಕವನ

ಲಾಲಿ ಲಾಲಿ ಸುಕುಮಾರ; ಲಾಲಿ ಮುದ್ದು ಬಂಗಾರ।
ಸ್ಥಾನಿಕರ ಕುಲದೈವ ಸುಬ್ರಹ್ಮಣ್ಯ; ಈಶ್ವರನ ವರಪುತ್ರ ಸುಬ್ರಹ್ಮಣ್ಯ॥

ಕಾರ್ತಿಕೇಯ ಸ್ವಾಮಿ ಶ್ರೀ ಸುಬ್ರಹ್ಮಣ್ಯ; ಪಾರ್ವತಿಯ ಪ್ರೀತಿ ಪಾತ್ರ ಸುಬ್ರಹ್ಮಣ್ಯ।
ಆರು ಮುಖ ಹೊಂದಿರುವ ಸುಬ್ರಹ್ಮಣ್ಯ; ಷಣ್ಮುಖ ಸ್ವಾಮಿ ನೀನು ಸುಬ್ರಹ್ಮಣ್ಯ॥


ಹುಟ್ಟಿ ಏಳೇ ದಿನದಲ್ಲಿ ಸುಬ್ರಹ್ಮಣ್ಯ; ತಾರಕನ ಕೊಂದಿರುವ ಸುಬ್ರಹ್ಮಣ್ಯ।
ದೇವಸೇನೆ ಕೂಡಿಕೊಂಡು ಸುಬ್ರಹ್ಮಣ್ಯ; ರಕ್ಕಸರ ಸದೆ ಬಡಿದ ಸುಬ್ರಹ್ಮಣ್ಯ॥

ಕುಕ್ಕೆ ಕ್ಷೇತ್ರದಧಿಪತಿಯೆ ಸುಬ್ರಹ್ಮಣ್ಯ; ಪಾವಂಜೆಯಲಿ ನೆಲೆಸಿರುವ ಸುಬ್ರಹ್ಮಣ್ಯ।
ಸ್ಥಾನಿಕರ ಕುಲದೈವ ಸುಬ್ರಹ್ಮಣ್ಯ; ನಮ್ಮನ್ನೆಲ್ಲ ಕಾಪಾಡುವ ಸುಬ್ರಹ್ಮಣ್ಯ॥

– ಮ.ನಾ.ಹೆಬ್ಬಾರ್



**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು




**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ**

ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ

ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. – ಆಡಳಿತ ಮಂಡಳಿ

**ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ**

ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363

# ಸುರತ್ಕಲ್‌ನಲ್ಲಿ ಆಟಿಡೊಂಜಿ ದಿನ



ದಿನಾಂಕ 04.08.2019 ನೇ ರವಿವಾರದಂದು ಸಂಘದ ವತಿಯಿಂದ ಆಟಿಡೊಂಜಿ ದಿನ ಕಾರ್ಯಕ್ರಮವನ್ನು ಗೋವಿಂದದಾಸ ಕಾಲೇಜಿನ ಎದುರು ಇರುವ ಮಾನಸ ಕಟ್ಟಡದಲ್ಲಿರುವ ಶ್ರೀ ವಿವೇಕಾನಂದ ಸಭಾಗೃಹದಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ನಮ್ಮ ಸಂಘದ ಸದಸ್ಯರು ಹಾಗೂ ಪಡುಬಿದ್ರಿ ಸಂಘದ ಸದಸ್ಯರು ಆಗಮಿಸಿದ್ದರು. ಬೆಳಿಗ್ಗೆ 10.30ಕ್ಕೆ ಸರಿಯಾಗಿ "ನಿತ್ಯ ಜೀವನದಲ್ಲಿ ಕಾನೂನು" ಎಂಬ ವಿಷಯದ ಬಗ್ಗೆ ವಕೀಲರಾದ ಶ್ರೀ ಪ್ರವೀಣ್ ಕುಮಾರ್ ಅದ್ಯಪಾಡಿಯವರು ಮಾಹಿತಿಯನ್ನು ನೀಡಿದರು. ನಮ್ಮ ಸಂಘದ ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಪರಿಮಳಾ ಪ್ರಶಾಂತ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು. ವೇದಿಕೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ.ಮಾಧವ ರಾವ್, ಗೌರವ ಅಧ್ಯಕ್ಷರಾದ ಶ್ರೀ ಭವಾನಿಶಂಕರ ರಾವ್, ಮುಖ್ಯ ಅತಿಥಿಗಳಾಗಿ ಎಂ.ಸಿ.ಎಫ್ ಕಂಪೆನಿಯ ನಿರ್ದೇಶಕರಾದ ಶ್ರೀ ಕೆ.ಪ್ರಭಾಕರ ರಾವ್, ಪಡುಬಿದ್ರಿ ಸಂಘದ ಅಧ್ಯಕ್ಷರಾದ ಶ್ರೀ ಮೋಹನ ರಾವ್ ಹಾಗೂ ನಮ್ಮ ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭಾಗ್, ಶ್ರೀ ಗೋಪಾಲಕೃಷ್ಣ, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಪರಿಮಳಾ ಪ್ರಶಾಂತ್, ಸಂಘದ ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರ ಶರ್ಮ, ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಸುಕುಮಾರ್ ಎಮ್.ಯು ಮುಂತಾದವರು ಉಪಸ್ಥಿತರಿದ್ದರು. ಪ್ರಾರ್ಥನೆಯ ಬಳಿಕ ಕುಮಾರಿ ಅರ್ಪಿತಾರವರು ಈ ಕಾರ್ಯಕ್ರಮದ ನಿರ್ವಹಣೆಯನ್ನು ಮಾಡಿದರು. ಶ್ರೀಮತಿ ಶರಣ್ಯಾ ಪಡುಪಣಂಬೂರು ಇವರು ಎಲ್ಲರನ್ನೂ ಸ್ವಾಗತಿಸಿದರು. ಮುಖ್ಯ ಅತಿಥಿಗಳು ಆಟಿ ತಿಂಗಳ ಮಹತ್ವ, ಅದರ ಆಚರಣೆ ಹಾಗೂ ಅದನ್ನು ಮುಂದಿನ ಜನಾಂಗಕ್ಕೆ ತಿಳಿಸುವ ರೀತಿಯ ಬಗ್ಗೆ ಮಾತನಾಡಿದರು. ಮುಂದೆ ವೇದಿಕೆ ಹಾಗೂ ಸಭೆಯಲ್ಲಿರುವವರಿಗೆ ಕೆಲವೊಂದು ಆಟೋಟಗಳನ್ನು ಕುಮಾರಿ ಶರ್ವಾಣಿ ಪಾವಂಜೆ ಇವರು ನೆರವೇರಿಸಿದರು. ಗೆದ್ದವರಿಗೆ ಒಂದೊಂದು ಹೂವಿನ ಗಿಡವನ್ನು ನೀಡಲಾಯಿತು. ಕೊನೆಗೆ ಶ್ರೀಮತಿ ಸಾವಿತ್ರಿ ಚಿತ್ರಾಪು ಇವರು ಧನ್ಯವಾದಗಳನ್ನು ಅರ್ಪಿಸಿದರು. ನಂತರ ಆಟಿಯ ತಿನಿಸುಗಳನ್ನೊಂಡಿರುವ ಭೋಜನವನ್ನು ಎಲ್ಲರಿಗೂ ನೀಡಲಾಯಿತು.

# ವಿನಾಯಕ ವಿಗ್ರಹ ನಿರ್ಮಾಪಕ ದೊಡ್ಮನೆ ರತ್ನಾಕರ ರಾವ್



ಚತುರ್ಭುಜಧಾರಿ ಗಣಪ ಪಾಶ, ಅಂಕುಶ, ದಂತವನ್ನು ಆಯುಧವಾಗಿರಿಸಿಕೊಂಡ ಗಣಪತಿ. ಅಭಯಧಾರಿ ವಿಘ್ನರಾಜ ಅಭೀಪ್ಸಿತಾರ್ಥ ಸಿಧ್ಯರ್ಥ. ಇಂತಹ ಗಜಾನನ ಆಕಾಶದ ದೇವತೆ. ಇಂತಹ ಗಣೇಶನನ್ನು ಮಣ್ಣಿನಿಂದ ರಚಿಸಿ ಕಳೆದ 32 ವರ್ಷದಿಂದ ನಿರಂತರವಾಗಿ ಕೇಳಿದವರಿಗೆ ಪೂರೈಸುತ್ತಿರುವವರು ಮೂಡುಬಿದಿರೆಯ ದೊಡ್ಮನೆ ರತ್ನಾಕರ ರಾಯರು. ಪ್ರತೀ ವರ್ಷ ಗುರುಪುರದಿಂದ ಉತ್ತಮ ಜಾತಿಯ ಮಣ್ಣನ್ನು ತಂದು ಹದಗೊಳಿಸಿ ಸುಮಾರು ಎರಡು ತಿಂಗಳ ಕಾಲ ಸತತವಾಗಿ ತಾನೇ ಕುಳಿತು ಗಣೇಶನನ್ನು ರಚಿಸುತ್ತಿರುವ ಇವರು ಮೊದಲಾಗಿ ಹೇಳಿದವರಿಗೆ ಮಾತ್ರ ಪೂರೈಸುತ್ತಾರೆ. 1987ರಲ್ಲಿ ಕೇವಲ ಒಂದು ಫೋಟೋವನ್ನಿಟ್ಟುಕೊಂಡು ಶೃಂಗೇರಿ ಶ್ರೀಗಳನ್ನು ನೆನೆಸಿಕೊಂಡು ಪ್ರಾರಂಭಿಸಿದ ಈ ರಚನಾಕಾರ್ಯ ಪ್ರತೀ ವರ್ಷ ಹೆಚ್ಚುತ್ತಲೇ ಸಾಗುತ್ತಿದ್ದು ಇದೀಗ ವಯಸ್ಸಾದರೂ ಕೇಳುಗರ, ಆಸಕ್ತರ ಒತ್ತಾಯಕ್ಕೆ ಕಟ್ಟುಬಿದ್ದು ಅನಿವಾರ್ಯವಾಗಿ ಪೂರೈಸಲೇ ಬೇಕಾದಂತಾಗಿದೆ ಎನ್ನುತ್ತಾರೆ. ಹಿಂದೆಲ್ಲಾ ಸ್ವತ: ಬಣ್ಣವನ್ನೂ ಅವರೇ ಕೊಡುತ್ತಿದ್ದರೆ, ಇತ್ತೀಚಿನ ಮೂರು-ನಾಲ್ಕು ವರ್ಷಗಳಿಂದ ಅವರ ಮೊಮ್ಮಗ ಅಭಿಷೇಕ್ ಅವರಿಗೆ ಸಹಾಯ ಮಾಡುತ್ತಿದ್ದಾರೆ. ದೊಡ್ಮನೆ ಚಂದ್ರಶೇಖರ ದೇವಾಲಯದ ಅರ್ಚಕ ಮೊಕ್ತೇಸರರೂ ಆಗಿರುವ ರತ್ನಾಕರ ರಾಯರು ದೇವಾಲಯವನ್ನು ಅಭಿವೃದ್ಧಿಪಡಿಸಿದಂತೆ ಗಣಪತಿ ರಚನೆಯಲ್ಲೂ ಸಿದ್ಧಹಸ್ತರೆನ್ನುವುದು ಹೆಚ್ಚಿನವರಿಗೆ ತಿಳಿದಿಲ್ಲ. ಇವರ ಕಲಾ ಪ್ರೌಢಿಮೆಯನ್ನು ಕಂಡು ಒಂದೆರಡು ಶಾಲೆಗಳವರು ಶಾರದೆಯ ಮೂರ್ತಿಯನ್ನೂ ಮಾಡಿಸಲು ಪ್ರಾರಂಭಿಸಿದ್ದಾರೆ. ತಮ್ಮ ಎಪ್ಪತ್ತೆರಡನೇ ವಯಸ್ಸಿನಲ್ಲೂ ಸತತ ಪರಿಶ್ರಮ ಪಟ್ಟು ಮಾಡುತ್ತಿರುವ ಈ ಎಲ್ಲಾ ಕಾರ್ಯಗಳನ್ನು ನಿಜಕ್ಕೂ ಮೆಚ್ಚಲೇಬೇಕು. ಗಜಾನನನ ಕೃಪೆ ಸದಾ ಇವರ ಮೇಲಿರಲೆಂದು ಸದಾಶಯ

## ಮಂಗಳಮುಖಿ :

**ಭಾಗ-1**

ಗಂಡಿಗೆ ಗಂಡಲ್ಲ...!  
ಹೆಣ್ಣಿಗೆ ಹೆಣ್ಣಲ್ಲ...!  
ಇವೆರಡರ ಮಧ್ಯದ ಮನುಷ್ಯಾತ್ಮ...!

ಗಂಡು ದೇಹದಲ್ಲಿ  
ಹೆಣ್ಣಿನ ಮನಸ್ಸು...!  
ಹೆಣ್ಣಿನ - ಉಡುಪು,  
ಹಾವಭಾವ, ವರ್ತನೆ...!!  
ಈ ರೀತಿ ಸೃಷ್ಟಿಸಿದ್ದೇಕೋ ಪರಮಾತ್ಮ...!!

ಉದುರಿದವಳಲ್ಲ, ಉಲ್ಕೆಯಂತೆ  
ಆಕಸ್ಮಿಕವಾಗಿ ಆಕಾಶದಿಂದ...!  
ಜನಿಸಿದವಳು, ಎನೆಲ್ಲ ಬನ್ನ ಬವಣೆ,  
ಅನುಭವಿಸಿ, ತಾಯಗರ್ಭದಿಂದ...!!

ಭಾರತೀಯ ಸಂಸ್ಕೃತಿಯ ಅರ್ಧನಾರೀಶ್ವರ  
ಪರಿಕಲ್ಪನೆಯ ಪ್ರತೀಕ...!  
ಮಹಾಭಾರತದ ಬ್ರಹನ್ನಳೆ ವೇಷದ  
ಅರ್ಜುನನ ದ್ಯೋತಕ...!!

ತೋರಬೇಡಿ ನನಗೆ ನಿಂದನೆ, ಅಪಶಬ್ದ  
ಗಳೊಂದಿಗೆ ತಿರಸ್ಕಾರ...!  
ಕಾನೂನಿನ ರಕ್ಷಣೆಯೊಂದಿಗೆ ನನಗಿದೆ  
ಸರಕಾರೀ ಪುರಸ್ಕಾರ...!!

ಕರೆಯುವರು ನನ್ನನ್ನು  
ಮುಂಬೈ ಸೇರಿದಂತೆ,  
ಉತ್ತರ ಭಾರತದಲ್ಲಿ ಹೆಜಡಾ  
ತಮಿಳುನಾಡಿನಲ್ಲಿ ಆರವಣೆ,  
ಆಂಧ್ರದಲ್ಲಿ ಶಿವಶಕ್ತಿ...!!

ಮಗುವಿನ ಹುಟ್ಟು,  
ವಯಸ್ಕರ ವಿವಾಹ  
ದಂತಹ ಮಂಗಳ ಕಾರ್ಯಗಳಿಗೆ  
ಒದಗುವವಳು, ಆದ್ದರಿಂದ  
ಕರ್ನಾಟಕದಲ್ಲಿ ಸುಂದರವಾದ  
ಹೆಸರು-ಮಂಗಳಮುಖಿ

ಗಮನಿಸಬೇಡಿ-ಕೇವಲ ನಮ್ಮ ದೇಹವನ್ನು  
ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ ನಮ್ಮ ಮನಸ್ಸನ್ನು

**-ಮಲ್ಲಿಕ್, ಉಳಿಯಾರು**

## ಕಂಡೆ ನಾ ಸುಬ್ರಹ್ಮಣ್ಯನ

ಕಂಡೆ ನಾ ಸುಬ್ರಹ್ಮಣ್ಯನಾ.... ಸುಬ್ರಹ್ಮಣ್ಯನಾ  
ಕಂಡೆ ನಾ ಸುಬ್ರಹ್ಮಣ್ಯನಾ  
ಸುಂದರ ವದನಾ...ಶ್ರೀ ಗೌರಿಯ ಕಂದನಾ...  
ಕಂಡೆ ನಾ ಸುಬ್ರಹ್ಮಣ್ಯನಾ... ॥ಪಲ್ಲವಿ॥

ಅಂಡಜ ವಾಹನ ಷಣ್ಮುಖನಾಥನ  
ದಂಡಾಯುಧಧರ ಧುರಂಧರನಾ  
ರುಂಡ ಮಾಲನ ಸುತ ಚಂಡವಿಕ್ರಮನಾ  
ಪುಂಡ ತಾರಕನನ್ನು ದಂಡಿಸಿದಾತನಾ  
ಕಂಡೆ ನಾ ಸುಬ್ರಹ್ಮಣ್ಯನಾ....... ಸುಬ್ರಹ್ಮಣ್ಯನಾ

ತ್ರಿಪುರ ಸಂಹಾರಕ ಶಿವನಕುಮಾರನ  
ತ್ರಿಜಗ ವಂದಿತ ಸ್ವಾಮಿ ಷಡಾನನ  
ಸುರಗಂನಾಯಕ ಅಸುರಸಂಹಾರಕ  
ಭವಭಯ ತಾರಕ ಭವಾನಿ ಸುತನ  
ಕಂಡೆ ನಾ ಸುಬ್ರಹ್ಮಣ್ಯನಾ....... ಸುಬ್ರಹ್ಮಣ್ಯನಾ

ಮಂದರ ಧರಶ್ರೀ  
ಬಂಧು ಕಂದ  
ನಂದಿವಾಹನ ಶಿವ ಚಂದ್ರಶೇಖರನಾ  
ಕಂದನ ಕಂಡೆನು ಶ್ರೀ ಸುಬ್ರಹ್ಮಣ್ಯನಾ  
ಕಂಡೆ ನಾ ಸುಬ್ರಹ್ಮಣ್ಯನಾ....... ಸುಬ್ರಹ್ಮಣ್ಯನಾ

ಕೊಡಿಗೆ ಪುರಕೆ ಬಂದ ಸಿರಿಮೊಗದರನನ  
ಪರಿ ಪರಿ ವಿಧದಲಿ ಪೂಜೆಗೊಂಬವನ  
ಸುರನರ ವಂದಿತ ಸಿರಿವಲ್ಲಿಯರನನಾ  
ಚರಣಕೆರಗುವೆನು ಶ್ರೀ ಸುಬ್ರಹ್ಮಣ್ಯನಾ

ಕಂಡೆ ನಾ ಸುಬ್ರಹ್ಮಣ್ಯನಾ... ಸುಬ್ರಹ್ಮಣ್ಯನಾ  
ಕಂಡೆ ನಾ ಸುಬ್ರಹ್ಮಣ್ಯನಾ...  
ಸುಂದರ ವದನಾ...ಶ್ರೀ ಗೌರಿಯ ಕಂದನಾ...  
ಕಂಡೆ ನಾ ಸುಬ್ರಹ್ಮಣ್ಯನಾ...

ಶ್ರೀ ಶ್ರೀ ಶ್ರೀ

**-ಅಪಯಶ, ಬೆಂಗಳೂರು**

## ಶುಭ ವಿವಾಹ

ನಂದಳಿಕೆ ಶ್ರೀ ಉಮೇಶ ರಾವ್ ಮತ್ತು ಶ್ರೀಮತಿ ಕವಿತಾ ಇವರ ಪುತ್ರಿ **ಕಾವ್ಯ** ಹಾಗೂ ನಿಧಿಮುಂಡ ಶ್ರೀಮತಿ ಸರೋಜಿನಿ ಹಾಗೂ ಡಾ। ನರಸಿಂಹ ಶರ್ಮ ಇವರ ಪುತ್ರ **ವಿಕಾಸ್** ಇವರ ವಿವಾಹವು **ತಾ.10-07-2019** ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

## ಗೃಹಪ್ರವೇಶ

ಬೆಂಗಳೂರಿನ ಶ್ರೀ ಅನಂತರಾಮ ಶಾಸ್ತ್ರಿ ಹಾಗೂ ಶ್ರೀಮತಿ ವೀಣಾರವರು ಕೆ.ಆರ್. ಪುರಮ್‌ನಲ್ಲಿ ನೂತನವಾಗಿ ಖರೀದಿಸಿದ ತನ್ನ ನಿವಾಸ ಸುಮತಿ ಪದ್ಮ ಇದರ ಗೃಹ ಪ್ರವೇಶವನ್ನು **ತಾ.18-08-2019**ರಂದು ನೆರವೇರಿಸಿದರು. ಇವರ ನೂತನ ವಿಳಾಸ ಈ ರೀತಿ ಇದೆ :

''ಸುಮತಿ ಪದ್ಮ'', ಫ್ಲ್ಯಾಟ್ ನಂ.007, ನೆಲ ಮಹಡಿ, ಶ್ರೀನಿಧಿ ಸರೋವರ್ ಅಪಾರ್ಟ್‌ಮೆಂಟ್, ಮೇದಾಹಳ್ಳಿ-ಸೀಗಾಹಳ್ಳಿ ಮುಖ್ಯ ರಸ್ತೆ, ಬಿಡಬ್ಲ್ಯುಎಸ್‌ಎಸ್‌ಬಿ ಆಫೀಸಿನ ಎದುರು, ಸೀಗೇಹಳ್ಳಿ, ಕೆ.ಆರ್.ಪುರಂ, ಬೆಂಗಳೂರು-560049.

## ನಿಧನ

### ಎರ್ಮಾಳು ಹರಿಶ್ಚಂದ್ರ ರಾಯರು




ಬೆಂಗಳೂರಿನಲ್ಲಿ ವಾಸವಾಗಿದ್ದ ಶ್ರೀ ಎರ್ಮಾಳು ಹರಿಶ್ಚಂದ್ರ ರಾಯರು ತಾ.22.08.2019ರಂದು ನಿಧನ ಹೊಂದಿದರು. ಇವರು ಸಿಂಡಿಕೇಟ್ ಬ್ಯಾಂಕಿನ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

### ಶ್ರೀಮತಿ ಪದ್ಮಾವತಿ



ಅದಮಾರು ಶ್ರೀಧರರಾಯರ ಪತ್ನಿ ನಿವೃತ್ತ ಶಿಕ್ಷಕಿ ಶ್ರೀಮತಿ ಪದ್ಮಾವತಿ ಇವರು ತಾ.09.09.2019ರಂದು ನಿಧನ ಹೊಂದಿದರು.



ಕಾಪು ತಾಲೂಕು,ಮಜೂರು ಗ್ರಾಮದ ಕರಂದಾಡಿ ಶಾನುಭಾಗರ ಮನೆಯಲ್ಲಿ ಸುಮಾರು 200 ವರ್ಷಗಳ ಇತಿಹಾಸ ಹೊಂದಿರುವ ಕುಟುಂಬಿಕರ ಕೂಡುವಿಕೆಯಿಂದ ಶ್ರೀ ಪದ್ಮನಾಭ ಶಾನುಭೋಗರು ಸ್ವತಃ ಮಣ್ಣಿನಲ್ಲಿ ನಿರ್ಮಿಸಿ ಪೂಜಿಸಲ್ಪಟ್ಟ ಗಣಪತಿ....

# ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ

ಮುಲ್ಲಡ್ಕ, ಅಂಚೆ : ಮುಂಡ್ಕೂರು–576121, ಕಾರ್ಕಳ ತಾಲೂಕು

ಭಕ್ತ ಮಹಾಜನರೇ,

**ಶ್ರೀಮತ್ ಪರಮಹಂಸ ಪರಿವ್ರಾಜಕಾರ್ಯವರ್ಯೇತ್ಯಾದಿ ಸಮಸ್ತ ಬಿರುದಾವಲೀ ವಿರಾಜಮಾನರಾದ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್ಕರ ಕಮಲ ಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ**

**ಸ್ವಸ್ತಿ! ಶ್ರೀ ಶಾಲಿವಾಹನ ವರ್ಷ ೧೯೪೧ನೇ ವಿಕಾರಿ ನಾಮ ಸಂವತ್ಸರದ ಆಶ್ವಯುಜ ಪಾಡ್ಯದಿಂದ ನವಮಿ ಪರ್ಯಂತ**

**ದಿನಾಂಕ 29.09.2019 ರಿಂದ ದಿನಾಂಕ 07.10.2019 ರ ವರೆಗೆ ವರ್ಷಂಪ್ರತಿ ನಡೆಯುವ**

## ನವರಾತ್ರ ಮಹೋತ್ಸವವು

ಜರಗಲಿರುವುದು.

ತಾವೆಲ್ಲರೂ ಬಂದು ಭಾಗವಹಿಸಿ, ತನು ಮನ ಧನಗಳಿಂದ ಸಹಕರಿಸಿ, ಶ್ರೀ ದೇವರ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಅನ್ನಪೂಣೇಶ್ವರೀ ದೇವರ ವಿಶೇಷ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ,

**– ಬಿ.ವಿ.ರಾವ್**

ಆಡಳಿತ ಮೊಕ್ತೇಸರರು (9880201725, 9980920013)

**ಮನವಿ : ಭಕ್ತರು ಅಕ್ಕಿ, ತೆಂಗಿನಕಾಯಿ, ತುಪ್ಪ, ಎಣ್ಣೆ, ಬೆಲ್ಲ ಅಥವಾ ಹಸಿರುವಾಣಿ ಹೊರೆಗಳನ್ನು ನೀಡಬೇಕಾಗಿ ವಿನಂತಿಸುತ್ತೇವೆ.**

1. ದೇವಸ್ಥಾನದ ಮೂಲಧನ (**Corpus Fund**)ಕ್ಕೆ ಸಹಾಯ ಮಾಡಬೇಕಾಗಿ ವಿನಂತಿ.
2. ದೇವಸ್ಥಾನದಲ್ಲಿ ಪ್ರತೀ ಹುಣ್ಣಿಮೆಯಂದು ದೇವರಿಗೆ ವಿಶೇಷ ಪೂಜೆ ಹಾಗೂ ಸಮಾರಾಧನೆ ನಡೆಯುತ್ತದೆ. ಭಕ್ತರು ಭಾಗವಹಿಸಬೇಕಾಗಿ ವಿನಂತಿ.
3. 12 ನವೆಂಬರ್ 2019 – ದೀಪೋತ್ಸವ

ಸೇವಾದಾರರು : ಶ್ರೀಮತಿ ಸರಿತಾ ಮತ್ತು ಶ್ರೀ ಕಿಲಂಗೋಡಿ ರಾಮಮೋಹನ್, ಬೆಂಗಳೂರು

4. ಧನಸಹಾಯ ನೀಡುವವರು **Syndicate Bank Mundkur, S.B. A/c No. 01462200004068 (IFSC No. SYNB 0000146)** ಇದಕ್ಕೆ ಕಳುಹಿಸಬೇಕಾಗಿ ವಿನಂತಿ. ಖಾತೆಗೆ ಹಣ ಕಳುಹಿಸಿದಲ್ಲಿ ದೂರವಾಣಿ ಅಥವಾ ಇ–ಮೇಲ್ ಮೂಲಕ ದಯವಿಟ್ಟು ತಿಳಿಸಬೇಕಾಗಿ ವಿನಂತಿ.


# ಬಹುಮುಖ ಪ್ರತಿಭೆ : ಶ್ರೀ ಹರೀಶ್ ಹೆಬ್ಬಾರ್ ಬಾರ್ಕೂರು



ಇಂತಹ ಗ್ರಾಮೀಣ ಪ್ರದೇಶದ ಕಾವಡಿಯಲ್ಲಿ ಹುಟ್ಟಿ ಈಗ ಪ್ರಸ್ತುತ ಹೇರಾಡಿಯ ಚಂಡೆ ಪ್ರದೇಶದಲ್ಲಿ ವಾಸ ವಿರುವ ಬಹುಮುಖ ಪ್ರತಿಭೆ ಶ್ರೀ ಹರೀಶ್ ಹೆಬ್ಬಾರ್. ಇವರು ಸುಗಮ ಸಂಗೀತ, ಯಕ್ಷಗಾನ, ಭಜನೆ, ಚಂಡೆವಾದನೆ ಧಾರ್ಮಿಕ ಕಾರ್ಯಕ್ರಮ ಹಾಗೂ ಸಾಮಾಜಿಕ ಸೇವೆಗಳಲ್ಲಿ ಪ್ರಾವೀಣ್ಯತೆ ಇರುವ ಯುವ ಶಕ್ತಿ. ಅಮೃತೇಶ್ವರೀ ಮತ್ತು ಸಾಲಿಗ್ರಾಮ ಮೇಳಗಳಲ್ಲಿ ಕಲಾವಿದರಾಗಿದ್ದ ಹವರಾಲು ದಿ.ಉಪೇಂದ್ರ ಹೆಬ್ಬಾರ್ ಪುತ್ರರಾಗಿರುವ ಇವರು ಹುಟ್ಟು ಕಲಾವಿದರಾಗಿದ್ದು, ಭಜನೆ, ಯಕ್ಷಗಾನಕ್ಕೆ ತನ್ನ ತಂದೆಯನ್ನೇ ಗುರುವನ್ನಾಗಿ ಪಡೆದ ಧನ್ಯರು. ಇವರು ಬಾರಕೂರು ಮೆಲೋಡಿಯನ್ ಬಾರ್ಕೂರು ಇದರಲ್ಲಿ ಹಿನ್ನೆಲೆ ಗಾಯಕರಾಗಿ ಹಾಗೂ ದಿ. ಕಾಳಿಂಗರಾವ್ ಸ್ಮೃತಿ ಮೆಲೋಡೀಸ್‌ನಲ್ಲಿ ಅತಿಥಿ ಕಲಾವಿದರಾಗಿದ್ದು ನೇಶನಲ್ ಕೈಗಾರಿಕಾ ಸಂಸ್ಥೆಯಲ್ಲಿ ದುಡಿಯುತ್ತಿದ್ದಾರೆ. 2018ರಲ್ಲಿ 'ವಾಯ್ಸ್ ಆಫ್ ಬಾರ್ಕೂರ್'ನ ರಾಜ್ಯ ಮಟ್ಟದ ಸಂಗೀತ ಸ್ಪರ್ಧೆಯಲ್ಲಿ ಫೈನಲಿಸ್ಟ್ ಆಗಿ ಭಾಗವಹಿಸಿರುತ್ತಾರೆ. ಕೋಟದಲ್ಲಿ ನಡೆದ "ಯು" ಚಾನೆಲ್‌ನವರ "ಕಾಣದ ಕಡಲಿಗೆ" ಇದರಲ್ಲಿ ಸೆಮಿಫೈನಲಿಸ್ಟ್ ಆಗಿ ಹಾಗೂ ಇತ್ತೀಚೆಗೆ ನಡೆದ 'ಅಭಿಮತ' ಟಿ.ವಿ ಚಾನೆಲ್‌ರವರ 'ವಾಯ್ಸ್ ಆಫ್ ಕೋಸ್ಟಲ್' ಸಂಗೀತ ಸ್ಪರ್ಧೆಯಲ್ಲಿ ಫೈನಲ್‌ಗೆ ಆಯ್ಕೆ ಆಗಿರುತ್ತಾರೆ. ಹವರಾಲು ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಬಳಗದಲ್ಲಿ ಯಕ್ಷಗಾನ ಕಲಾವಿದರಾಗಿದ್ದು, ಭಜನಾ ತಂಡಗಳಲ್ಲಿ ತಬಲಾ ವಾದಕರಾಗಿಯೇ ಸಂಗೀತ ಸೇವೆ ಮಾಡುತ್ತಿದ್ದಾರೆ. ಶ್ರೀ ರಘುನಾಥ ಅಲ್ಸೆಯವರ ಚೇತನಾ ಚಂಡೆ ಬಳಗದಲ್ಲಿ ಚಂಡೆವಾದಕರಾಗಿದ್ದಾರೆ. ಶ್ರೀ ಗುಂಡ್ಮಿ ನಾಗಪ್ಪಯ್ಯ ನಾವಡರ ತಂಡದಲ್ಲಿ ಜಿಲ್ಲೆಯ ಸುಮಾರು 20 ದೇವಸ್ಥಾನಗಳಲ್ಲಿ ದೇವರನ್ನು ಹೊತ್ತು ಸಾಗುವ ಪಲ್ಲಕ್ಕಿಗೆ ಹೆಗಲು ಕೊಟ್ಟು ದೇವತಾ ಕಾರ್ಯ ಮಾಡುತ್ತಿದ್ದಾರೆ. ಹವರಾಲು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿರುತ್ತಾರೆ. ತಾಯಿ ಶ್ರೀದೇವಿ ಹೆಬ್ಬಾರ್, ಪತ್ನಿ ನಾಗರತ್ನ ಹೆಬ್ಬಾರ್ ಹಾಗೂ ಪುತ್ರಿ ಸಾನಿಧ್ಯ ಹೆಬ್ಬಾರ್ ಜೊತೆ ಸುಖ ಸಂಸಾರದಲ್ಲಿರುವ ಇವರಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಜನತೆ ನೀಡಬೇಕಾಗಿದ್ದು, ರಾಜ್ಯ, ರಾಷ್ಟ್ರ ಮಟ್ಟದ ಪ್ರಶಸ್ತಿ, ಪುರಸ್ಕಾರಗಳು ದೊರೆಯಲಿ ಎಂಬುದೇ ಮಿತ್ರರ ಆಶಯ.



**ಸೋಣಾರತಿಯಂದು ಸಾಲಂಕೃತಗೊಂಡ ಪಾದೆಬೆಟ್ಟು ವಿಷ್ಣುಮೂರ್ತಿ ದೇವರು**



ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ) ಇದರ 82 ನೇ ವಾರ್ಷಿಕ ಮಹಾಸಭೆಯು ತಾ.18.08.2019ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 11.00 ಕ್ಕೆ ಸರಿಯಾಗಿ ಶ್ರೀ ಕರುಣ್‌ರಾವ್ ಬೆಳ್ಳೆ ಇವರ ಅಧ್ಯಕ್ಷತೆ ಯಲ್ಲಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಶತಮಾನೋತ್ಸವ ಸಭಾಭವನದಲ್ಲಿ ಜರುಗಿತು.



ಬಾರಕೂರು ಧರ್ಮಶಾಲೆ ಶ್ರೀ ಮಾಸ್ತಿಅಮ್ಮನವರ ದೇವಸ್ಥಾನದಲ್ಲಿ ಶ್ರೀ ಮಾಸ್ತಿದುರ್ಗಾ ಚಿಣ್ಣರ ಬಳಗದ ಮಕ್ಕಳಿಗೆ ದೇವಸ್ಥಾನದ ಅರ್ಚಕರು ಕೊಡಮಾಡುವ 14ನೇ ವರ್ಷದ ಉಚಿತ ಕಲಿಕೋಪಕರಣಗಳ ವಿತರಣೆ ಮಾಧ್ಯಮ ಮಿತ್ರರೊಂದಿಗೆ ಜರುಗಿತು.




ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರಿನಲ್ಲಿ ಅಷ್ಟಮಿಯ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ನೆರವೇರಿದವು.



ತಾ.24–08–2019ರಂದು ಶೃಂಗೇರಿಯಲ್ಲಿ ಜಗದ್ಗುರುಗಳಿಂದ ಆಶೀರ್ವಾದ ಪಡೆಯಲು ಸೇರಿದ ನಮ್ಮ ಸಮಾಜಬಾಂಧವರು.



ಬಂಟಕಲ್ಲಿನ ಸಾರ್ವಜನಿಕ ಗಣೇಶೋತ್ಸವದಲ್ಲಿ ನಿವೃತ್ತ ಗಡಿಭದ್ರತಾ ಯೋಧ ದಿನಕರ ರಾಯರನ್ನು ಸನ್ಮಾನಿಸಲಾಯಿತು.



## ಮಹಿಳಾ ವೇದಿಕೆಯಿಂದ ಹೂವಿನಪೂಜೆ

ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ತಾ.06.09.2019ರ ಸಂಜೆ ಮಹಿಳಾವೇದಿಕೆಯ ವತಿಯಿಂದ ವಿಶೇಷ ಹೂವಿನ ಪೂಜೆ ನೆರವೇರಿತು. ಹೆಚ್ಚಿನ ಸಂಖ್ಯೆಯ ಸಮಾಜಬಾಂಧವರು ಹಾಗೂ ಪರಿಸರದ ಭಕ್ತರು ದೇವಿಯ ಅನುಗ್ರಹಕ್ಕೆ ಪಾತ್ರರಾದರು. ಆ ಪ್ರಯುಕ್ತ ದೇವಿಗೆ ಹಾಗೂ ದೇವಸ್ಥಾನಕ್ಕೆ ವಿಶೇಷ ಅಲಂಕಾರ ಮಾಡಲಾಗಿತ್ತು

## ಭಜನಾಮಂಡಳಿಗೆ ಧ್ವನಿವರ್ಧಕದ ಕೊಡುಗೆ



ಶ್ರೀ ಶಾರದಾ ಭಜನಾಮಂಡಳಿಯು ಜನಪ್ರಿಯವಾಗುತ್ತಾ ಇದ್ದು ಪ್ರತೀ ತಿಂಗಳು ಅಲ್ಲಲ್ಲಿ ಕಾರ್ಯಕ್ರಮಗಳನ್ನು ನೀಡುತ್ತಿರುವುದರಿಂದ ಅವರಿಗೆ ಭಜನಾ ಕಾರ್ಯಕ್ರಮ ನಡೆಸುವಲ್ಲಿಗೆ ತೆಗೆದುಕೊಂಡಲು ಹೋಗಲು ಅನುಕೂಲವಾಗುವಂತಹಾ ಧ್ವನಿವರ್ಧಕವನ್ನು ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್‌ರವರು ಕೊಡುಗೆಯಾಗಿ ನೀಡಿದರು. ಈ ಧ್ವನಿವರ್ಧಕವನ್ನು ಪ್ರಪ್ರಥಮವಾಗಿ ಶೃಂಗೇರಿಗೆ ಹೋಗುವಾಗ ಬಳಸಿ ಉದ್ಘಾಟಿಸಲಾಯಿತು.

## ಶ್ರೀ ಗಣೇಶ ಹೆಬ್ಬಾರ್‌ರಿಗೆ ಸನ್ಮಾನ



ಉಡುಪಿಯ ಖ್ಯಾತ ಲೆಕ್ಕಪರಿಶೋಧಕರಾದ ಶ್ರೀ ಗಣೇಶ ಹೆಬ್ಬಾರ್‌ರವರನ್ನು ಉಡುಪಿ ಪರ್ಯಾಯ ಶ್ರೀ ಪಲಿಮಾರು ಮಠಾಧೀಶರು ರಾಜಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಿದರು.

## ಶ್ರೀ ಐ.ಕೆ ಜಯಚಂದ್ರರವರಿಗೆ ಸನ್ಮಾನ



ಉಡುಪಿಯ ಶ್ರೀ ಐ.ಕೆ.ಶಿವರಾಮರಾಯರ ಪುತ್ರ ಶ್ರೀ ಐ ಕೆ ಜಯಚಂದ್ರ ಇವರನ್ನು ಸಾಮಾಜಿಕ ಸೇವೆಯಲ್ಲಿ ಮಾಡಿದ ಸಾಧನೆಗಾಗಿ ಉಡುಪಿ ಪರ್ಯಾಯಾಧೀಶರು ರಾಜಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನಿಸಿದರು

## ಶ್ರೀ ಶಾರದಾ ಭಜನಾ ಮಂಡಳಿಯಿಂದ ಕಾರ್ಯಕ್ರಮ



ಉಡುಪಿ ಶ್ರೀ ಶಾರದಾ ಭಜನಾ ಮಂಡಳಿಯಿಂದ ಕಡಿಯಾಳಿ ಗಣೇಶೋತ್ಸವದ ಪ್ರಯುಕ್ತ ಕಡಿಯಾಳಿ ದೇವಸ್ಥಾನದಲ್ಲಿ ಹಾಗೂ ಉಡುಪಿ ಶ್ರೀ ಕೃಷ್ಣ ದೇವಸ್ಥಾನದಲ್ಲಿ ಭಜನಾ ಕಾರ್ಯಕ್ರಮ ನೆರವೇರಿತು

## ಸವಿತಾ ಎರ್ಮಾಳು ಇವರಿಗೆ ಅತ್ಯುತ್ತಮ ಶಿಕ್ಷಕಿ ರಾಜ್ಯ ಪ್ರಶಸ್ತಿ



ಸರಕಾರಿ ಪದವಿಪೂರ್ವ ಕಾಲೇಜು ಬ್ರಹ್ಮಾವರದಲ್ಲಿ ಆಂಗ್ಲ ಭಾಷಾ ಉಪನ್ಯಾಸಕಿ ಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಮತಿ ಸವಿತಾ ವೈ ಇವರಿಗೆ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ದೊರೆತಿದೆ. ಇವರು ಎನ್.ಎಸ್.ಎಸ್. ಯೋಜನಾಧಿಕಾರಿಯಾಗಿ, ಸ್ವೀಪ್ ಸಮಿತಿಯ ಸದಸ್ಯೆಯಾಗಿ, ಏಕ್ ಭಾರತ್ ಶ್ರೇಷ್ಠ ಭಾರತ್ ಯೋಜನೆಯ ಕರ್ನಾಟಕದ ರಾಯಭಾರಿಯಾಗಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸದಾ ಸಕ್ರಿಯರಾಗಿ ತೊಡಗಿಸಿಕೊಂಡಿದ್ದಾರೆ.




## ದಿನಮಣಿ ಶಾಸ್ತ್ರಿಯವರಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ

ಬ್ರಹ್ಮಾವರದ ಸರಕಾರಿ ಪ್ರೌಢಶಾಲೆಯ ಶ್ರೀ ದಿನಮಣಿ ಶಾಸ್ತ್ರಿ ಇವರಿಗೆ ಈ ಬಾರಿಯ ಜಿಲ್ಲಾಮಟ್ಟದ ಅತ್ಯುತ್ತಮ ಶಿಕ್ಷಕ ಪುರಸ್ಕಾರ ದೊರೆತಿದೆ. ಸಂಘದ ಸಕ್ರಿಯ ಕಾರ್ಯಕರ್ತರಾದ ಅವರಿಗೆ ನಮ್ಮ ಅಭಿನಂದನೆಗಳು. ಇವರು ಅತ್ಯುತ್ತಮ ಛಾಯಾಗ್ರಾಹಕರೂ ಆಗಿದ್ದಾರೆ.



## ಪ್ರಾಚಾರ್ಯರಾಗಿ ಪದೋನ್ನತಿ

ಹುಬ್ಬಳ್ಳಿಯ ಆಯುರ್ವೇದ ಮಹಾವಿದ್ಯಾಲಯದ ಪ್ರಾಧ್ಯಾಪಕ ರಾಗಿದ್ದ ಡಾ। ಪ್ರಶಾಂತ್‌ಎ.ಎಸ್ ಇವರು ಪದೋನ್ನತಿಗೊಂಡು ಅದೇ ಸಂಸ್ಥೆಯ ಪ್ರಾಚಾರ್ಯರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಇವರು ದಿವಂಗತ ಅಡೂರು ಶ್ರೀಧರ ರಾಯರ ಪುತ್ರ. ಇವರು ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಆಯುರ್ವೇದ ಅಧ್ಯಯನ ಪೀಠದ ಚೇರ್ಮನ್ ಆಗಿರುತ್ತಾರೆ.



## ಶ್ರೀ ಮ.ನಾ.ಹೆಬ್ಬಾರರಿಗೆ ಸಮ್ಮಾನ

ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ಉಡುಪಿಯ ಬ್ರಹ್ಮಗಿರಿ ಲಯನ್ಸ್ ಕ್ಲಬ್‌ನವರು ವಿಶ್ರಾಂತ ಕನ್ನಡ ಉಪನ್ಯಾಸಕರಾದ ಶ್ರೀ ಹರಿದಾಸ ಮ.ನಾ. ಹೆಬ್ಬಾರ್ ಇವರನ್ನು ಶಾಲು, ಹಣ್ಣು ಹಂಪಲು, ಸ್ಮರಣಿಕೆಗಳನ್ನಿತ್ತು ಸಮ್ಮಾನಿಸಿದರು. ಆಸುಪಾಸಿನ ಒಟ್ಟು ಐದು ಲಯನ್ಸ್ ಕ್ಲಬ್‌ಗಳ ಸಂಯೋಜನೆಯಲ್ಲಿ ಈ ಕಾರ್ಯಕ್ರಮವು ಜರಗಿತ್ತು.

**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
Real Estate Developer Rating
CRISIL DA3+ CREDAI

## ವಿದ್ವತ್ ಸನ್ಮಾನ, ರಕ್ಷಾಬಂಧನ ಮತ್ತು ನೆರೆಸಂತ್ರಸ್ತರಿಗೆ ನೆರವು







ಶ್ರೀ ಶಾರದಾ ಮಂಟಪದಲ್ಲಿ ಒಂದು ತಿಂಗಳ ಕಾಲ ಪ್ರತೀದಿನ ಸಂಜೆ ಆಸಕ್ತ ಸಮಾಜಬಾಂಧವರಿಗೆ ವೈದಿಕ ಪಾಠ, ದೇವಪೂಜಾವಿಧಿಗಳನ್ನು ಕಲಿಸಿದ ನಮ್ಮ ಸಮಾಜದ ಖ್ಯಾತ ಪುರೋಹಿತರಾದ ಶ್ರೀ ಹೆಜಮಾಡಿ ಕೃಷ್ಣರಾಜ ಭಟ್‌ರವರನ್ನು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ವತಿಯಿಂದ ತಾ.15.08.2019ರಂದು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಶ್ರೀ ಯು ಅರವಿಂದ ಕುಮಾರ್ ಕೋಶಾಧಿಕಾರಿ ಶ್ರೀ ಬಿ. ಜಯರಾಮ ರಾವ್‌ರವರು ಸಮಾಜಬಾಂಧವರ ಸಮ್ಮುಖದಲ್ಲಿ ಶ್ರೀಯುತರಿಗೆ ಶಾಲು ಹೊದಿಸಿ ಫಲಪುಷ್ಪ ಹಾಗೂ ಸ್ಮರಣಿಕೆಗಳನ್ನಿತ್ತು ಸನ್ಮಾನಿಸಿದರು.

ಅದೇ ದಿನಸಂಜೆ ಸಂಘದ ವತಿಯಿಂದ ರಕ್ಷಾಬಂಧನವನ್ನು ಆಚರಿಸಲಾಯಿತು. ಮಹಿಳಾವೇದಿಕೆಯ ಸದಸ್ಯೆಯರು ರಕ್ಷಾಬಂಧನ ಗೀತೆಯನ್ನುಹಾಡಿದರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಉಡುಪಿ ಶಾಖೆಯ ಧುರೀಣ ಶ್ರೀ ಸಂಜೀವ ನಾಯಕ್ ಅತಿಥಿಯಾಗಿ ಆಗಮಿಸಿ ರಕ್ಷಾಬಂಧನದ ಮಹತ್ವವನ್ನು ವಿವರಿಸಿದರು. ನಂತರ ಪರಸ್ಪರ ರಕ್ಷಾಬಂಧನವನ್ನು ಕಟ್ಟಿಕೊಳ್ಳುವುದರೊಂದಿಗೆ ರಕ್ಷಾಬಂಧನವನ್ನು ಆಚರಿಸಲಾಯಿತು. ಸುಮಾರು ನೂರಕ್ಕೂ ಮಿಕ್ಕಿ ಸಮಾಜಬಾಂಧವರು ಆಗಮಿಸಿದ್ದರು.

ಈ ಬಾರಿಯ ಮಳೆಗಾಲದಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಉಂಟಾದ ನೆರೆಪ್ರವಾಹದಿಂದ ಸಂತ್ರಸ್ತರಾದವರ ಸಹಾಯಕ್ಕೆ ಧಾವಿಸಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದೊಂದಿಗೆ ನಮ್ಮ ಸಂಘವೂ ಕೈಜೋಡಿಸಿತು. ಸಮಾಜಬಾಂಧವರಿಂದ ದೇಣಿಗೆಯನ್ನು ಸಂಗ್ರಹಿಸಿ ಒಟ್ಟು 78000 ರೂಗಳ ಚೆಕ್ಕನ್ನು ಉಡುಪಿಯ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥರಾದ ಡಾ ನಾರಾಯಣ ಶೆಣೈಯವರಿಗೆ ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ್ ಹೆಬ್ಬಾರ್ ರವರು ಹಸ್ತಾಂತರಿಸಿದರು

## ಚಿನ್ಮಯ ಮಿಷನ್‌ನಿಂದ ಭಗವದ್ಗೀತಾ ಪ್ರವಚನ ಸಪ್ತಾಹ




ಮಂಗಳೂರಿನ ಆಚಾರ್ಯ ಚಿನ್ಮಯ ಮಿಷನ್‌ನ ಗುರುಗಳಾದ ಸ್ವಾಮಿ ಅಪರಾಜಿತಾನಂದಜೀಯವರಿಂದ ಶ್ರೀ ಶಾರದಾ ಮಂಟಪದಲ್ಲಿ ತಾ.13-09-2019ರಿಂದ ತಾ.19-09-2019ರ ವರೆಗೆ ಒಂದು ವಾರದ ಕಾಲ ಪ್ರತಿ ದಿನ ಸಂಜೆ ಭಗವದ್ಗೀತೆಯ ತೃತೀಯ ಅಧ್ಯಾಯ ಕರ್ಮಯೋಗದ ಬಗ್ಗೆ ಪ್ರವಚನ ನಡೆಯಿತು. ಸಂಘದ ಉಪಾಧ್ಯಕ್ಷರಾದ ಡಾ। ವೈ.ಸುದರ್ಶನ್ ರಾವ್‌ರವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀಮತಿ ರೂಪಾ ವಸಂತ ರಾವ್ ಹಾಗೂ ಶ್ರೀ ಕೃಷ್ಣಕುಮಾರ್ ಮಟ್ಟು ಕಾರ್ಯಕ್ರಮವನ್ನು ನಿರೂಪಿಸಿದ್ದರು.

## ಕಟಪಾಡಿ ಶಿವರಾವ್ ಮತ್ತು ಬೆಳ್ಳೆ ಸದಾನಂದ ರಾವ್ ಇವರಿಗೆ ಗೌರವಾರ್ಪಣೆ





2019, ಅಗೋಸ್ತು 15 ರಂದು ಕಟಪಾಡಿ ಶಿವರಾವ್ ಮತ್ತು ಬೆಳ್ಳೆ ಸದಾನಂದ ರಾವ್ ಇವರಿಬ್ಬರನ್ನು ಅವರ ಸ್ವಗೃಹದಲ್ಲಿ ಉಡುಪಿಯ ಸಮಾನ ಮನಸ್ಕರ ಕೂಟವಾದ ಮಿತ್ರವೃಂದದವರು ಸನ್ಮಾನಿಸಿದರು. ಕಟಪಾಡಿ ಶಿವರಾವ್ ಇವರು ಶ್ರೇಷ್ಠ ಶಿಕ್ಷಕರಾಗಿದ್ದು ಅವರಿಗೆ ಹೂ ಹಾರವನ್ನು ಹಾಕಿ, ಶಾಲು ಹೊದಿಸಿ, ಫಲಪುಷ್ಪಗಳನ್ನಿತ್ತು ದೇವರ ಮೂರ್ತಿಯನ್ನು ಕಾಣಿಕೆಯಾಗಿ ನೀಡಿ ಸನ್ಮಾನಿಸಲಾಯಿತು. ಅವರ ಪತ್ನಿಗೆ ಸೀರೆಯನ್ನಿತ್ತು ಗೌರವಿಸಲಾಯಿತು. ಬೆಳ್ಳೆ ಸದಾನಂದ ರಾವ್ ಇವರು ಮೂಡುಬೆಳ್ಳೆಯಲ್ಲಿ ಆದರ್ಶ ಶಿಕ್ಷಕರಾಗಿದ್ದವರು. ಅವರಿಗೆ ಹೂ ಹಾರವನ್ನು ಹಾಕಿ, ಶಾಲು ಹೊದಿಸಿ, ಫಲಪುಷ್ಪಗಳನ್ನಿತ್ತು ಮತ್ತು ದೇವರ ಮೂರ್ತಿಯನ್ನು ಕಾಣಿಕೆಯನ್ನಾಗಿ ನೀಡಿ ಸನ್ಮಾನಿಸಲಾಯಿತು. ಅವರ ಪತ್ನಿಗೆ ಸೀರೆಯನ್ನಿತ್ತು ಗೌರವಿಸಲಾಯಿತು. ಈ ಕಾರ್ಯಕ್ರಮದ ನೇತೃತ್ವವನ್ನು ವಸಂತರಾವ್ ಕರಂಬಳ್ಳಿ ಮತ್ತು ಶ್ರೀ ವೈ.ಮೋಹನ್ ರಾವ್ ವಹಿಸಿದ್ದರು. ಎಂ. ಪಾಲಚಂದ್ರ ರಾವ್, ಎನ್. ಉದಯಚಂದ್ರ ರಾವ್, ಎನ್.ಉಮೇಶರಾವ್, ಎನ್. ಪ್ರವೀಣ್ ಕುಮಾರ್, ಸುಬ್ರಹ್ಮಣ್ಯ ರಾವ್ ಪುತ್ತಿಗೆ, ಕೃಷ್ಣಾನಂದ ರಾವ್ ಉಂಡಾರು, ಬೆಳ್ಮಣ್ಣು ಸುರೇಶ ರಾವ್, ಧರ್ಮೇಂದ್ರ ಹೆಬ್ಬಾರ್, ಬಿ.ದಿನೇಶ್, ಬೆಳ್ಳೆ ರಾಮರಾವ್, ಟಿ. ಜಗದೀಶ ರಾವ್, ಬಿ. ವಿವೇಕ ರಾವ್, ಮಹೇಶ ರಾವ್ ಇವರೆಲ್ಲರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಶ್ರೀ ಕುಮಾರಸ್ವಾಮಿಯವರಿಗೆ ಬೆಳ್ಳಿ ಪದಕ



ಬ್ರೂನೈ ದೇಶದಲ್ಲಿ ಇತ್ತೀಚೆಗೆ ನಡೆದಿದ್ದ ವಿಶ್ವ ಹಿರಿಯರ ಕ್ರೀಡಾಕೂಟದಲ್ಲಿ ಉಡುಪಿ ಜಿಲ್ಲೆ, ಕಾಪು ತಾಲೂಕು ಎರ್ಮಾಳು ಕುಮಾರಸ್ವಾಮಿಯವರು ಹಿರಿಯರ (70+) ವಿಭಾಗದ 1500 ಮೀಟರ್ ಓಟದಲ್ಲಿ ಬೆಳ್ಳಿಯ ಪದಕ ಪಡೆದಿದ್ದಾರೆ. ಇವರು ಈ ಹಿಂದೆಯೂ ಶ್ರೀಲಂಕಾ ಹಾಗೂ ಥ್ಯಾಲ್ಯಾಂಡ್ ದೇಶಗಳಲ್ಲಿ ನಡೆದ ಅಂತಾರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಪದಕಗಳನ್ನು ಪಡೆದಿರುವುದನ್ನು ಸ್ಮರಿಸಬಹುದು.







Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org